# ಜನಶಕ್ತಿ

ಪಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 18
ಮಾರ್ಚ್ ೨ ೧೯೫೮
★
ಪುಟ ೧೦ ಬೆಲೆ: ೧೩ ನ. ಪೈಸೆ
★

# ವಿಮಾನ ಕಾರ್ಮಿಕರ ಮೇಲೆ ಅಮಾನುಷ ಹತ್ಯಾಕಾಂಡ!

ಬೆಂಗಳೂರಿನ ಪೋಲೀಸಿನವರು ನಗರದ ಕಾರ್ಮಿಕರ ಮೇಲೆ ಅಮಾನುಷ ಹಿಂಸಾ ಕಾಂಡವನ್ನೇ ಆರಂಭಿಸಿದ್ದಾರೆ. ಮಂಗಳ ವಾರ 25ರಂದು ವಿಮಾನ ಕಾರ್ಖಾನೆಯ ಶಾಂತ ನೌಕರರ ಮೇಲೆ ಹಲವಾರು ಬಾರಿ ಗುಂಡು ಹಾರಿಸಿ ಒಬ್ಬ ಕಾರ್ಮಿಕನನ್ನು ಕೊಂದದ್ದಲ್ಲದೆ ಹಲವಾರು ಕಾರ್ಮಿಕ ರನ್ನು ತೀವ್ರವಾಗಿ ಗಾಯಗೊಳಿಸಿದ್ದಾರೆ. ನಗರದ ಸಿಲ್ಕ್ ಕಾರ್ಮಿಕರ ಮೇಲೂ ಬಲವಾದ ಲಾಠಿ ಛಾರ್ಜು ಮಾಡಿದ್ದಾರೆ. ಮೃತಪಟ್ಟ ಕಾರ್ಮಿಕನ ದೇಹವನ್ನು ಕುಟುಂಬದವರಿಗೆ ಕೊಡುವ ಸೌಜನ್ಯ ವನ್ನು ತೋರದೆ, ಕಮ್ಯೂನಿಸ್ಟ್ ಪಾರ್ಟಿ

## ಪೋಲೀಸರಿಂದ ಗೋಳಿಬಾರು! 144 ಸೆ. ಎಲ್ಲರ ತಲೆಯ ಮೇಲೆ!

ಪ್ರಾಂತ ಸಮಿತಿ ಕಾರ್ಯದರ್ಶಿಗಳಾದ ಎಸ್. ಎಲ್. ಉಪಾಧ್ಯಾಯರನ್ನೂ, ಜನಶಕ್ತಿ ಸಂಪಾದಕರಾದ ಸಿ. ಆರ್. ಕೃಷ್ಣರಾವ್ ಮತ್ತು ಗೋಪಾಲರನ್ನೂ, ಸಿಲ್ಕ್ ಮತ್ತು ವಿಮಾನ ಕಾರ್ಖನೆಯ ಕಾರ್ಮಿಕರನ್ನು ದಸ್ತಗಿರಿ ಮಾಡಲಾಗಿದೆ. ವಿಮಾನ ಕಾರ್ಖಾನೆಯ ಆಡಳಿತವರ್ಗ ಕಾರ್ಖಾನೆಯನ್ನು ಮುಚ್ಚಿದೆ; ಬೆಂಗ

## ವಿಮಾನ ಕಾರ್ಖಾನೆ ಲಾಕ್‌ಔಟ್ ತೆಗೆಯಲಿ!

ಳೂರಿನಲ್ಲಿ ಸಭೆ ಮೆರವಣಿಗೆ ನಡೆಯದಂತೆ ಕಟ್ಟಾಜ್ಞೆ ಹಾಕಲಾಗಿದೆ.

ನಗರದಲ್ಲಿ ಹಲವಾರು ವರ್ಷಗಳಿಂದ ಇಲ್ಲದ ಅಶಾಂತ ಪರಿಸ್ಥಿತಿಯನ್ನು ಸರ್ಕಾರ ತಂದೊಡ್ಡಿದೆ. ಬೆಂಗಳೂರಿನಲ್ಲಿ 1942ರ ನಂತರ 1948ರಲ್ಲಿ ಗೋಳಿಬಾರು ನಡೆ ದಿದ್ದು ಇಂದು ಮತ್ತೊಮ್ಮೆ ನಡೆದಿದೆ. ನಡೆದ ಈ ಘಟನೆಗಳನ್ನು ನೋಡಿದರೆ ಸರ್ಕಾರದ ನೀತಿಯೇ ಕಾರಣವೆಂಬುದು ಸ್ಪಷ್ಟವಾಗುವುದು.

೨೫–೨–೫೮ರಂದು ("ಜನಶಕ್ತಿ" ಓದುಗರಿಗೆ ತಿಳಿದಂತೆ) ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪತಿಯಿಂದ ಪ್ರತಿಭಟನಾ ದಿನಾಚರಣೆ ಏರ್ಪಡಿಸಲಾಯಿತು ಸರ್ಕಾರದ ಕಾರ್ಮಿಕ ನೀತಿಯಿಂದ ಆಗಿರುವ ಕಷ್ಟಗಳನ್ನು ವಿವರಿಸಲು ಈ ಸಭೆ ಕರೆದಿದ್ದಷ್ಟೆ. ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಪರಿಸ್ಥಿತಿ ಚರ್ಚಿಸುವ ಸಲುವಾಗಿ ಮಾತ್ರವಲ್ಲ. ಹೀಗಿದ್ದರೂ, ಸರ್ಕಾರ 25 ನೇ ತಾರೀಖು ಸುಮಾರು 12 ಘಂಟೆ (ಮಧ್ಯಾಹ್ನ) ಸಮಯದಲ್ಲಿ ಈ ಸಭೆಯನ್ನು ತಡೆಯುವ ಉದ್ದೇಶದಿಂದ 144ನೇ ಸೆ. ಜಾರಿಮಾಡಿತು. ಹೀಗೆ ಮಾಡಲು ಯಾವ ಅಗತ್ಯವೂ ಇದ್ದಿಲ್ಲ; ಅಶಾಂತ ಪರಿಸ್ಥಿತಿಯೋ ಅಥವಾ ಗಲಾಟೆಯಾಗುವ ಸ್ಥಿತಿಯೋ ಇದ್ದಿಲ್ಲ. 144 ನೇ ಸೆ. ಜಾರಿಗೆ ತಂದದ್ದೇ ಅಶಾಂತ ಪರಿಸ್ಥಿತಿಗೆ ಮೊದಲ ಕಾರಣವಾಯಿತು.

ಅಂದು ಈ ವಿಷಯಗಳನ್ನು ತಿಳಿಯುವ ಹಲವು ಕಾರ್ಖಾನೆಗಳ ಕಾರ್ಮಿಕರು ಕೆ. ಪಿ. ಟಿ. ಯು. ಸಿ. ಸಭೆಗೆ ಬರಲು ಪ್ರಯತ್ನಿಸಿದರು. ವಿಮಾನ ಕಾರ್ಖಾನೆಯ ನೌಕರರು ಸಹ ಈ ಸಭೆಗೆ ಹೊರಟು ಬಂದರು; ಬರುತಿದ್ದಾಗ ದಾರಿಯಲ್ಲಿ ಪೋಲೀಸರ ಹಠಾತ್ತಾದ ಧಾಳಿ ನಿರಾಯುಧಪಾಣಿಗಳಾದ ಕಾರ್ಮಿಕರ ಮೇಲೆ ಆರಂಭವಾಯಿತು. ವಿಮಾನ ಕಾರ್ಖಾನೆಯ ಆವರಣದಲ್ಲೇ ಗುಂಡು ಹಾರಿಸಲಾಯಿತು; ಒಬ್ಬನ ಮರಣ ತಕ್ಷಣವೇ ಆಯಿತು. ಈ ಹಲ್ಲೆಯಿಂದ ಕೋಪಗೊಂಡ ಕಾರ್ಮಿಕರ ಮೆರವಣಿಗೆ ಮುಂದೆ ಸಾಗಿತು ಮಹಾತ್ಮ ಗಾಂಧಿ ರಸ್ತೆಗೆ ಮೆರವಣಿಗೆ ಬಂದಾಗ ಮತ್ತೊಮ್ಮೆ ಪೋಲಿಸರು ಜನರನ್ನು ತಡೆದರು. ಕಾರ್ಮಿಕರೆಲ್ಲಾ ಮುಂದೆ ಹೋಗದೆ ಅಲ್ಲೇ ಕುಳಿತರು. ಹೀಗೆ ಶಾಂತವಾಗಿ ಕುಳಿತ ಕಾರ್ಮಿಕರ ಮೇಲೆ ಕ್ರೂರವಾದ ಲಾಠೀ ಛಾರ್ಜ್ ಮಾಡಲಾಯಿತು.

ಸ್ಪಷ್ಟವಾಗುವುದು. ಮರುದಿನ ಈ ದಬ್ಬಾಳಿಕೆಯನ್ನು ಪ್ರತಿಭಟಿಸಿ ಅನೇಕ ಫ್ಯಾಕ್ಟರಿಗಳ ಕಾರ್ಮಿಕರು ಮುಷ್ಕರ ನಡೆಸಿದರು. (ಮೆಷೀನ್ ಟೂಲ್ಸ್, ಎಲೆಕ್ಟ್ರಾನಿಕ್ಸ್, ಸಿಲ್ಕ್ ಫ್ಯಾಕ್ಟರಿಗಳಲ್ಲೂ ....)

ಈ ದಬ್ಬಾಳಿಕೆಯಿಂದ ಧೃತಿಗೆಡದ ಕಾರ್ಮಿಕರು ಊರ ಹೊರಗೆ ಸಭೆ ಸೇರಲು ತೀರ್ಮಾನಿಸಿದರು; ಸಭೆಯನ್ನು ನಡೆಸಿದರು.

ಇವೆಲ್ಲವನ್ನು ನೋಡಿದ ಸರ್ಕಾರ, ಇಂದು ಈ ಚಳವಳಿಗೆ ಒಂದು ರಾಜಕೀಯ ಬಣ್ಣ ಕೊಡಲು ಹಂಚಿಕೆ ಹಾಕಿದೆ. ಕಮ್ಯೂನಿಸ್ಟರು ಪಿತೂರಿ ನಡೆಸಿ ಹಿಂಸಾಕಾಂಡವನ್ನುಂಟು ಮಾಡಿದರೆಂಬ ಆರೋಪಣೆಯನ್ನು ಹೊರಿಸಲು ಹವಣಿಸುತ್ತಿದ್ದಾರೆ.

(ಕೊನೇ ಪುಟ ನೋಡಿ)

## ಕಮ್ಯೂನಿಸ್ಟರ ಮೇಲೆ ಪೋಲೀಸರ ಖಟ್ಲೆ

ಬುಧವಾರ 26-2-58ರಂದು ಬೆಳಗ್ಗೆ ಸುಮಾರು 11 ಘಂಟೆಯಲ್ಲಿ ಪೋಲೀಸರು ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿಯ ಕಛೇರಿಯ ಮೇಲೆ ಧಾಳಿ ನಡೆಸಿ, ಈ ಕೆಳಕಂಡವರನ್ನು ದಸ್ತಗಿರಿ ಮಾಡಿತು. ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ. ಎಸ್. ಎಲ್. ಉಪಾಧ್ಯಾಯ, 'ಜನಶಕ್ತಿ' ಸಂಪಾದಕರಾದ ಶ್ರೀ. ಸಿ. ಆರ್. ಕೃಷ್ಣರಾವ್ ಮತ್ತು ಉಪಸಂಪಾದಕರಾದ ಶ್ರೀ ಗೋಪಾಲ್, ಸಿಲ್ಕ್ ಕಾರ್ಮಿಕರ ಮುಂದಾಳುಗಳು ಮತ್ತು ಕಾರ್ಪೊರೇಷನ್ ಕೌನ್ಸಿಲರೂ ಆದ ಶ್ರೀ. ಸಿದ್ದಪ್ಪ, ಸಿಲ್ಕ್ ಕೆಲಸಗಾರರ ಸಂಘದ ಕಾರ್ಯಕರ್ತರುಗಳಾದ ಆರ್. ಭಾಸ್ಕರಯ್ಯ ಎನ್. ದೊರೆಸ್ವಾಮಿ, ಚೆಲುವಯ್ಯ, ಚಿಕ್ಕಮರಿ, ಎಲ್. ರಾಚಪ್ಪ, ಎನ್. ನರಸಿಂಹಯ್ಯ ಪಿ. ಎಚ್. ರಾಜಣ್ಣ, ಸಿ. ವೆಂಕಟೇಶ್, ರಾಮಕೃಷ್ಣಯ್ಯ ಮೊದಲಾದವರು.

(ಕೊನೇ ಪುಟ ನೋಡಿ)

### ಪ್ರಕಟಣೆ

ತಾ. 26—2—58ನೇ ಬುಧವಾರದಂದು ಬೆಳಿಗ್ಗೆ ಸುಮಾರು 11 ಘಂಟೆ ವೇಳೆಯಲ್ಲಿ ಹಠಾತ್ತನೆ ಪೋಲೀಸರು, ಕಮ್ಯೂನಿಸ್ಟ್ ಪಾರ್ಟಿ ಕಛೇರಿ ಮತ್ತು ಜನಶಕ್ತಿ ಕಾರ್ಯಾಲಯದ ಮೇಲೆ ಧಾಳಿ ನಡೆಸಿ ಎಲ್ಲರನ್ನೂ ಬಂಧಿಸಿದರು. ಇದರಿಂದಾಗಿ "ಜನಶಕ್ತಿ"ಯ ಅಚ್ಚಿನ ಕಾರ್ಯ ಅರ್ಧದಲ್ಲೇ ನಿಂತಿತು. 'ಜನಶಕ್ತಿ' ಸಂಪಾದಕ ಶಾಖೆಯವರನ್ನು ತಾ 27—2—58ನೇ ಗುರುವಾರ ಮಧ್ಯಾಹ್ನ 3 ಘಂಟೆ ಮೇಲೆ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ನಂತರ, 'ಜನಶಕ್ತಿ'ಯ ಕಾರ್ಯ ಮುಂದುವರಿಯಲು ಸಾಧ್ಯವಾಯಿತು. ಈ ಕಾರಣದಿಂದ 'ಜನಶಕ್ತಿ' ಓದುಗರ ಕೈಗೆ ಸೇರುವುದು ಈ ವಾರ ತಡವಾಗಿದೆ. ಅದಕ್ಕಾಗಿ ಕ್ಷಮೆ ಕೇಳುತ್ತೇವೆ.

ವ್ಯವಸ್ಥಾಪಕರು.



### ಜನಶಕ್ತಿ

ವಾರ ಪತ್ರಿಕೆ

ಬೆಂಗಳೂರು-೨

| | | |
|---|---|---|
| ೧. | ಪ್ರಕಟನೆಯ ಸ್ಥಳ | ಬೆಂಗಳೂರು ನಗರ |
| ೨. | ಪ್ರಕಟಣೆಯ ಕಾಲಮಿತಿ | ವಾರ ಪತ್ರಿಕೆ |
| ೩. | ಮುದ್ರಕರು | ಸಿ. ಆರ್. ಕೃಷ್ಣರಾವ್ |
| | ರಾಷ್ಟ್ರೀಯತೆ | ಭಾರತೀಯ |
| | ವಿಳಾಸ | L-೫೯, ಕಾಶೀವಿಶ್ವೇಶ್ವರ ಗುಡಿ ರಸ್ತೆ ಸುಲ್ತಾನ್‌ಪೇಟೆ, ಬೆಂಗಳೂರು – ೨ |
| ೪. | ಪ್ರಕಾಶಕರು | ಸಿ. ಆರ್. ಕೃಷ್ಣರಾವ್ |
| | ರಾಷ್ಟ್ರೀಯತೆ | ಭಾರತೀಯ |
| | ವಿಳಾಸ | L-೫೯, ಕಾಶೀವಿಶ್ವೇಶ್ವರ ಗುಡಿ ರಸ್ತೆ ಸುಲ್ತಾನ್‌ಪೇಟೆ, ಬೆಂಗಳೂರು – ೨ |
| ೫ | ಸಂಪಾದಕರು | ಸಿ. ಆರ್. ಕೃಷ್ಣರಾವ್ |
| | ರಾಷ್ಟ್ರೀಯತೆ | ಭಾರತೀಯ |
| | ವಿಳಾಸ | L-೫೯, ಕಾಶೀವಿಶ್ವೇಶ್ವರ ಗುಡಿ ರಸ್ತೆ ಸುಲ್ತಾನ್‌ಪೇಟೆ, ಬೆಂಗಳೂರು – ೨ |
| ೬. | ಮಾಲೀಕರು | ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿ L-೫೯, ಕಾಶೀವಿಶ್ವೇಶ್ವರ ಗುಡಿ ರಸ್ತೆ ಸುಲ್ತಾನ್‌ಪೇಟೆ, ಬೆಂಗಳೂರು – ೨ |

ಮೇಲೆ ನಮೂದಾದ ವಿವರಗಳು ನನ್ನ ತಿಳುವಳಿಕೆಯ ಮೇರೆಗೆ ಎಲ್ಲವೂ ಸರಿ ಇವೆ.

ಸಿ. ಆರ್. ಕೃಷ್ಣರಾವ್
ಪ್ರಕಾಶಕರಿಗಾಗಿ

೨—೩—೫೮

# ಪ್ರತಿಭಟನಾ ದಿನಾಚರಣೆ

**ಪ್ರಾಂತೀಯ ಸುದ್ದಿ ಸಂಗ್ರಹ**

### ತುಮಕೂರು

ತಾ. 23ರಂದು ತುಮಕೂರು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ತುಮಕೂರಿನ ಮಾರ್ಕೆಟ್ ಚೌಕದಲ್ಲಿ ಪುರಸಭಾ ಸದಸ್ಯರಾದ ಕಾಂ|| ಟಿ. ಎಲ್. ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯು ಪ್ರಾರಂಭವಾಗುವ ಮುನ್ನ ಅಧ್ಯಕ್ಷರು–ಸ್ವಾತಂತ್ರ್ಯಕ್ಕಾಗಿ ದುಡಿದ ದೇಶದ ಏಳಿಗೆಗಾಗಿ ಶ್ರಮಿಸುತ್ತಿದ್ದ ಹಿರಿಯ ನಾಯಕರಾದ ಮೌಲಾನಾ ಅಬುಲ್‌ಕಲಾಂ ಆಜಾದರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಂಡಿಸಿ, ಮೌನವನ್ನಾಚರಿಸಿದ ನಂತರ ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದ ಕಾಂ|| ಹೆಚ್. ಸಿ. ಚನ್ನಪ್ಪನವರು ರೈತ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಇಂದಿನ ಕಾಂಗ್ರೆಸು ಸರಕಾರ ಹಿಂದೆಬಿದ್ದಿದೆಯೆಂದು ಹಲವಾರು ಉದಾಹರಣೆಗಳನ್ನಿತ್ತು ಮಾತನಾಡಿದರು. ನಂತರ ಕಾಂ|| ಮಂಜುನಾಥರವರು ನಗರದ ಮುನ್ಸಿಪಲ್ ಕೆಲಸಗಾರರ ಬೇಡಿಕೆಗಳನ್ನು ಪುರಸಭೆಯು ಈಡೇರಿಸದೇ ದಿನಕಳೆಯುತ್ತಿರುವ ಬಗ್ಗೆ ಖಂಡಿಸಿ ಮಾತನಾಡಿದರು.

ನಂತರ ಬೆಂಗಳೂರಿನಿಂದ ಅಂದಿನ ಸಭೆಗೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳೂ ಕಾರ್ಮಿಕ ಮುಖಂಡರೂ ಆದ ಕಾಂ|| ಎಸ್. ಸೂರ್ಯನಾರಾಯಣ ರಾವ್‌ರವರು ಸರ್ಕಾರದ ಜನವಿರೋಧಿ ನೀತಿಯನ್ನು ಎದುರಿಸಿ ಹೋರಾಡಲು ಪ್ರಜಾಪ್ರಭುತ್ವ ಶಕ್ತಿಗಳು ಹೆಚ್ಚು ಬಲಯುತವಾಗಿ ಬೆಳೆಯಬೇಕೆಂದೂ ಆದ್ದರಿಂದ ಕಮ್ಯೂನಿಸ್ಟ್ ಪಕ್ಷಕ್ಕೆ ಬೆಂಬಲ ಕೊಡಬೇಕೆಂದು ಜನತೆಯನ್ನು ಕೋರಿದರು.

ನಂತರ ನಗರದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕಾಂ|| ಕೆ. ಆರ್. ನಾಯಕ್‌ರವರು ಮಂಡಿಸಿದ ಈ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು.

**ನಿರ್ಣಯಗಳು :**

● ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ಮೈಸೂರು ಸರ್ಕಾರಕ್ಕೆ ಸಾಕಷ್ಟು ಹಣವನ್ನು ಒದಗಿಸದೇ ಜೀವನಾಧಾರ ಎನಿಸುವ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗದೇ ಅಭಿವೃದ್ಧಿಯನ್ನು ತಡೆಹಿಡಿಯಬೇಕಾಗಿರುವುದರಿಂದ ಕೇಂದ್ರ ಸರಕಾರವು ಮೈಸೂರು ಸರಕಾರಕ್ಕೆ ದ್ವಿತೀಯ ಯೋಜನೆಯಲ್ಲಿ ಹೆಚ್ಚು ಹಣವನ್ನೊದಗಿಸಬೇಕು.

● ಮುಂಧ್ರಾ ಪ್ರಕರಣದಲ್ಲಿ ಹೊಣೆಗಾರರಾಗಿರುವ ಎಲ್ಲಾ ಅಧಿಕಾರಿಗಳನ್ನೂ ಶಿಕ್ಷೆಗೆ ಗುರಿಪಡಿಸಬೇಕು.

● ಮೈಸೂರು ಸರ್ಕಾರವು ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿರುವುದನ್ನು ಖಂಡಿಸುವ, ವಿಮಾನ ಕಾರ್ಖಾನೆ ನೌಕರರ ಹೋರಾಟಕ್ಕೆ ಬೆಂಬಲವನ್ನು ಸೂಚಿಸುವ ಮತ್ತು ನೌಕರರ ಮೇಲೆ ಹಾಕಿರುವ ಕೇಸುಗಳನ್ನು ಸರ್ಕಾರವು ಹಿಂತೆಗೆದುಕೊಳ್ಳಬೇಕೆನ್ನುವ ಮತ್ತು 144ನೇ ವಿಧಿಯನ್ನು ರದ್ದುಗೊಳಿಸಬೇಕು.

● ಪ್ರಗತಿಶೀಲ ಭೂಸುಧಾರಣೆಯನ್ನು ಜಾರಿಗೆ ತರಬೇಕೆನ್ನುವ ಮತ್ತು ದೊಡ್ಡದೊಡ್ಡ ಭೂಮಾಲೀಕರು, ಉಳುವ ರೈತರಿಗೆ ಅನುಕೂಲವಾಗುವಂತೆ ಭೂಸುಧಾರಣೆಯನ್ನು ತರದಂತೆ ಸರ್ಕಾರದ ಮೇಲೆ ಒತ್ತಾಯಿಸುತ್ತಿರುವುದನ್ನು ಖಂಡಿಸುವ ಮತ್ತು ಒಕ್ಕಲೆಬ್ಬಿಸುವುದರ ವಿರುದ್ಧ ಸರಕಾರ ಕ್ರಮ ಕೈಗೊಳ್ಳಬೇಕು.

● ಸರ್ಕಾರವು ನೇಮಿಸುವ ಯಾವ ಸಲಹಾ ಸಮಿತಿಗಳಾಗಲೀ ಅಥವಾ ವಿಚಾರಣಾ ಸಮಿತಿಗಳಲ್ಲಾಗಲೀ ಎಲ್ಲಾ ಪಕ್ಷಗಳಿಗೂ ಪ್ರಾತಿನಿಧ್ಯವನ್ನು ಕೊಡಬೇಕು.

● ತುಮಕೂರು ಪುರಸಭಾ ನೌಕರರ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಿಕೊಳ್ಳುವಂತೆ ಪುರಸಭೆಯನ್ನು ಒತ್ತಾಯಿಸುವ ಮತ್ತು ತುಮಕೂರಿನಲ್ಲಿ ಫಸ್ಟ್ ಗ್ರೇಡ್ ಕಾಲೇಜು ಕಟ್ಟಡವನ್ನು ಕಟ್ಟಿಸಿ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಯನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಕೋರುವ ಹಾಗೂ ನಿರ್ಣಯಗಳನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಡಬೇಕೆನ್ನುವ ನಿರ್ಣಯಗಳಾದುವು.

ಕಾಮ್ರೇಡ್ ಅಡನೀಶ್‌ರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

### ಭದ್ರಾವತಿ

ಇದೇ ತಾ. 23—2—58ನೇ ದಿನ ನಡೆದ ಪ್ರತಿಭಟನಾ ದಿನಾಚರಣೆಯ ಅಂಗವಾಗಿ ಸಾಯಂಕಾಲ ಹಾಲಪ್ಪ ಸರ್ಕಲ್ ಬಳಿ ಶಿವಮೊಗ್ಗದ ವಕೀಲರಾದ ಬಿ. ಎನ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಪ್ರಾರಂಭವಾಗುವ ಮೊದಲು ಗತಿಸಿದ ಅಬುಲ್‌ಕಲಾಂ ಆಜಾದರ ಗೌರವಾರ್ಥವಾಗಿ ಸಂತಾಪ ಸೂಚಿಸಿ ಎರಡು ನಿಮಿಷ ಮೌನವನ್ನು ಆಚರಿಸಲಾಯ್ತು.

ಭದ್ರಾವತಿಯ ಕಾರ್ಖಾನೆ ಕೆಲಸಗಾರರಾದ ಎಂ. ಆರ್. ಸೂರ್ಯನಾರಾಯಣ್‌ರವರು ಕೂಲಿಕಾರ ಸಂಘದಲ್ಲಿರುವ ಲೋಪದೋಷ, ಚುನಾವಣೆ ನಡೆದ ನೀತಿ, ಹಾಗೂ ಕಾರ್ಮಿಕ ಪ್ರತಿನಿಧಿ ಎಂದು ಆರಿಸಿಬಂದ ನಾಯಕನ ಕರ್ತವ್ಯವನ್ನು ವಿವರಿಸಿದರು.

ಕಾಗದದ ಕಾರ್ಖಾನೆ ಕೆಲಸಗಾರರಾದ ಎಚ್. ಎಸ್. ಚಂದ್ರಶೇಖರ್‌ರವರು ಸರಕಾರದವರು ಕೂಲಿಗಾರರ ವಿಷಯದಲ್ಲಿ ತೋರಿಸುತ್ತಿರುವ ದೌರ್ಜನ್ಯವನ್ನು ಖಂಡಿಸಿ ದೇಶದ ಹಲವಾರು ಕ್ಷೇತ್ರಗಳಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಖಂಡಿಸಿದರು. ಮತ್ತು ವೆಂಕಟಪ್ಪನವರು ಕೇರಳದ ಕಮ್ಯೂನಿಸ್ಟ್ ಸರ್ಕಾರದ ಕಾರ್ಯಕ್ರಮ ಹಾಗೂ ಅಲ್ಲಿನ ಮಂತ್ರಿಗಳ ಆದರ್ಶಪ್ರಾಯವಾದ ನೀತಿಗಳನ್ನು ಸಭೆಗೆ ತಿಳಿಸಿ ಹೇಳಿದರು.

ಚಂದುಕುಟ್ಟಿ ನಾಯರ್‌ರವರು ಸ್ಥಳೀಯ ವಿಷಯದ ಬಗ್ಗೆ ಮಾತಾಡುತ್ತಾ ಮುನಿಸಿಪಾಲಿಟಿಯು ಸೈಕಲ್ ಸುಂಕವನ್ನು ವಿಧಿಸಿರುವುದು ಅನ್ಯಾಯ. ಇವನ್ನು ಮನ್ನಾ ಮಾಡಬೇಕು. ಕ್ಲಬ್‌ಗಳ ಹೆಸರಿನಲ್ಲಿ ನಡೆಯುತ್ತಿರುವ ಜೂಜಾಟಗಳನ್ನು ತಡೆಗಟ್ಟಬೇಕು. ಮತ್ತು ಜವಾಬ್ದಾರಿಯುತ ಮುನಿಸಿಪಲ್ ಕೌನ್ಸಿಲರ್ಸ್‌ಗಳು ಕಳ್ಳಭಟ್ಟಿ, ಜೂಜು ಇಂತಹ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಕೊಡಬಾರದಾಗಿ ಕೇಳಿಕೊಂಡರು.

ನಂತರ ಕಾ|| ಬಿ ಎನ್. ಎ. ಹೆಗ್ಡೆ ಮಾತಾಡುತ್ತಾ, ಕಾಂಗ್ರೆಸ್ಸಿಗರು ಅಧಿಕಾರಕ್ಕೆ ಬಂದು 10 ವರ್ಷಗಳಾದರೂ ಭೂಸುಧಾರಣೆಯನ್ನು ಜಾರಿಗೆ ತಂದಿಲ್ಲ. ಅಲ್ಲದೆ ನಮ್ಮ ಪ್ರಾಂತದಲ್ಲಿ ಕಾಂಗ್ರೆಸ್ಸಿಗರು ತಾವೇ ನೇಮಿಸಿದ ಜತ್ತಿ ಸಮಿತಿಯ ಭೂಸುಧಾರಣೆಯನ್ನು ತರಲು ಸಹ ತಯಾರಿಲ್ಲದಿರುವುದು, ಕಾಂಗ್ರೆಸ್ಸಿಗರು ಪ್ರಗತಿಪರ ಶಾಸನಗಳಿಗೆ ವಿರೋಧಿಗಳಾಗಿದ್ದಾರೆಂಬುದು ಗೊತ್ತಾಗುತ್ತದೆ ಎಂದು ತಿಳಿಸಿದರು.

ನಂತರ ಭೂಸುಧಾರಣೆ ವಿಷಯದಲ್ಲಿ, ಎಚ್. ಎ. ಎಲ್. ಕೆಲಸಗಾರರ ಬೇಡಿಕೆ ಈಡೇರಿಸಿಕೊಡಲು, ಹಾಗೂ ಈ ಒಂದೆ ಭದ್ರಾವತಿ ಕಾರ್ಮಿಕರಿಗೆ ಕೊಡುತ್ತಿದ್ದ ಬೆಂಗಳೂರು ಮಟ್ಟದ ತುಟ್ಟಿಭತ್ಯವನ್ನು ಕೊಡಲು ಮತ್ತು ಸೈಕಲ್ ಸುಂಕ ಮತ್ತು ಅದರ ಮೇಲಿರುವ ವಾರ್ಷಿಕ ಕಂದಾಯ ಮನ್ನಾಮಾಡಲು ನಿರ್ಣಯವನ್ನು ಕೈಗೊಳ್ಳಲಾಯ್ತು. ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯ್ತು.

### ಬಿಜಾಪುರ

ಬಿಜಾಪುರ ಕಮ್ಯೂನಿಸ್ಟ್ ಪಾರ್ಟಿ ಮತ್ತು ಮುನಿಸಿಪಲ ಕೆಲಸಗಾರ ಸಂಘದ ಪರವಾಗಿ ತಾ. 23—2—58ರಂದು ಪ್ರತಿಭಟನಾ ದಿನಾಚರಣೆಯನ್ನಾಚರಿಸಲಾಯಿತು. ಸಂಜೆ 5 ಗಂಟೆಗೆ ಮುನಿಸಿಪಲ ಕೆಲಸಗಾರರ ಮೆರವಣಿಗೆ ಹೊರಟು, ಊರಲ್ಲಿ ಅಡ್ಡಾಡಿ ರೇಡಿಯೋ ಮೈದಾನದಲ್ಲಿ ಕೊನೆಗೊಂಡಿತು. ಸಭೆಯ ಪ್ರಾರಂಭದಲ್ಲಿ ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳಾದ ಶ್ರೀ ಮೌಲಾನಾ ಅಬ್ದುಲ್ ಕಲಂ ಆಜಾದರ ಮರಣದ ಸಲುವಾಗಿ ದುಃಖ ಸೂಚನಾ ಠರಾವು ಮಾಡಲಾಯಿತು. ಆನಂತರ ಶ್ರೀ ಎಸ್. ಕೆ. ಉಪಾಧ್ಯಾಯರು, ಕಮ್ಯೂನಿಸ್ಟ್ ಪಾರ್ಟಿ ಮತ್ತು ಕೂಲಿಗಾರ ಸಂಘಟನೆಗಳ ಪರವಾಗಿ ಕರ್ನಾಟಕಾದ್ಯಂತ ಈ ಹೊತ್ತು ಪ್ರತಿಭಟನಾ ದಿನವನ್ನಾಚರಿಸಲು ನಿರ್ಧರಿಸಿದರ ಮಹತ್ವ ತಿಳಿಸಿ ಹೇಳಿ, ಕರ್ನಾಟಕ ಪ್ರಾಂತವಾಗಿ 16 ತಿಂಗಳುಗಳಾದರೂ ಕೂಡಾ ಜನಹಿತಕರವಾಗುವಂಥಾ ಒಂದೇ ಒಂದು ಮಹತ್ವದ ಕಾಯಿದೆಯನ್ನೂ ಮೈಸೂರು ಸರಕಾರ ಪಾಸು ಮಾಡಲಿಲ್ಲೆಂದೂ, ಮೈಸೂರು ಸರಕಾರ ಏನಾದರೂ ಮಾಡಿದ್ದರೆ, ವಿಲೀನೀಕರಣ ಹೊಂದಿದ ಪ್ರದೇಶಗಳಲ್ಲಿಯ ನೌಕರದಾರರ, ಪೋಲೀಸರ ಪಗಾರ ಮತ್ತು ತುಟ್ಟಿ ಭತ್ತೆ ಕಡಿಮೆ ಮಾಡಿದೆಯೆಂದೂ, ಆಡಳಿತೆಯಲ್ಲಿ ಲಂಚಗುಳಿತನ, ಪಕ್ಷಪಾತತನ ಹೆಚ್ಚಾಗಿದೆಂದೂ, ಕಾಂಗ್ರೆಸ್ಸಿಗರ ಒಳಜಗಳದಿಂದಾಗಿ ಆಡಳಿತೆ ಸಡಿಲಾಗುತ್ತಿದೆಂದೂ ಹೇಳಿದರು. ಹತ್ತೇ ತಿಂಗಳಲ್ಲಿ ಕೇರಳದಲ್ಲಿಯ ಕಮ್ಯೂನಿಸ್ಟ್ ಸರಕಾರ ರೈತರ, ಕೂಲಿಗಾರರ, ಶಿಕ್ಷಕರ ಮತ್ತು ನೌಕರದಾರರ ಸಲುವಾಗಿ ಮಾಡಿದ ಕಾಯಿದೆ ಕಾನೂನುಗಳನ್ನು ತಿಳಿಸಿ ಹೇಳಿ, ಮೈಸೂರ ಸರಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು. ಬಾಗಲಕೋಟ ಸಿಮೆಂಟ ಕಾರ್ಖಾನೆಯ, ಕೆಲಸಗಾರರ ಮೇಲಾಗುತ್ತಿರುವ ಅನ್ಯಾಯ, ಹರಿಹರದ ಕಿರ್ಲೋಸ್ಕರ ಕೆಲಸಗಾರರ ಮತ್ತು ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಮಜದೂರರ ಮೇಲೆ ಸರಕಾರದವರು ನಡೆಸುತ್ತಿರುವ ಅನ್ಯಾಯ ಖಂಡಿಸಿ, ಸರಕಾರ ಕೂಲಿಗಾರರ ಸಂಬಂಧ ಧೋರಣೆ ಮಾಡಬೇಕೆಂದರು. ಕಮ್ಯೂನಿಸ್ಟ್ ಪಾರ್ಟಿ ಸಲುವಾಗಿ ಕಾಂಗ್ರೆಸ್ಸಿಗರೂ, ಬಂಡವಾಳಶಾಹಿಗಳೂ ಮಾಡುತ್ತಿರುವ ಅಪಪ್ರಚಾರವನ್ನು ಅಲ್ಲಗಳೆಯುವುದರ ಸಲುವಾಗಿ ಇತ್ತೀಚೆಗೆ ಕೇಂದ್ರ ಸಮಿತಿಯವರು ಕಮ್ಯೂನಿಸ್ಟ್ ಪಾರ್ಟಿಯ ಘಟನೆಯ ಘೋಷಣೆಯಲ್ಲಿ ಮಾಡಿರುವ ಬದಲಾವಣೆಯ ಮಹತ್ವವನ್ನು ತಿಳಿಸಿ ಹೇಳಿ, ಕಮ್ಯೂನಿಸ್ಟ್ ಪಾರ್ಟಿ ಎಂದಿಗೂ ಹಿಂಸಾವಾದಿಯಲ್ಲ. ಆದರೂ ಜನರಲ್ಲಿರುವ ಭ್ರಮೆಯನ್ನು ತೆಗೆದುಹಾಕುವುದರ ಸಲುವಾಗಿ ಮತ್ತು ಪ್ರಬಲವಾದಂಥ ಕಮ್ಯೂನಿಸ್ಟ್ ಪಾರ್ಟಿ ಕಟ್ಟುವುದರ ಸಲುವಾಗಿ ಕೇಂದ್ರ ಸಮಿತಿಯವರು ಶಾಂತಯುತ ಮತ್ತು ಘಟನಾತ್ಮಕ ರೀತಿಯಿಂದಲೇ ನಾವು ದೇಶದಲ್ಲಿ ಸಮತಾವಾದ ಮತ್ತು ಕಮ್ಯೂನಿಸಂ ಸ್ಥಾಪನೆ ಮಾಡುತ್ತೇವೆ ಮತ್ತು ಕಮ್ಯೂನಿಸ್ಟ್ ಪಾರ್ಟಿ ಭಾರತದಲ್ಲಿ ಅಧಿಕಾರಕ್ಕೆ ಬಂದರೆ ವಿರೋಧಿ ಪಕ್ಷದವರಿಗೂ ತಮ್ಮ ಪಾರ್ಟಿ ಚಟುವಟಿಕೆ ನಡೆಸಲಿಕ್ಕೆ ಅವಕಾಶ ಕೊಡುತ್ತೇವೆಂದು ಹೇಳಿರುವರು. ಕಾಂಗ್ರೆಸ್ಸಿನ ದುರಾಡಳಿತೆಯನ್ನು ತೆಗೆದುಹಾಕಬೇಕಾದರೆ ಬಲಿಷ್ಠವಾದ ಕಮ್ಯೂನಿಸ್ಟ್ ಪಾರ್ಟಿ ಕಟ್ಟುವದವಶ್ಯವಿದೆಂದು ಹೇಳಿ, ಎಲ್ಲರೂ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿ, ಬಲವಾದ ಪಾರ್ಟಿ ಕಟ್ಟಲು ಸಹಾಯ ಮಾಡಬೇಕೆಂದು ಹೇಳಿದರು. ಆನಂತರ ಜಯಘೋಷಗಳೊಡನೆ ಸಭಾಂತ್ಯವಾಯಿತು.

### ಸರಕಾರೀ ದವಾಖಾನೆಯಲ್ಲಿ ಎಕ್ಸರೇ ವ್ಯವಸ್ಥೆಯಿಲ್ಲ

ಬಿಜಾಪುರ ಸರಕಾರಿ ದವಾಖಾನೆಯಲ್ಲಿ ಕಳೆದ 5 ತಿಂಗಳುಗಳಿಂದ ಎಕ್ಸರೇ ತೆಗೆಯುವ ವ್ಯವಸ್ಥೆಯಿಲ್ಲದಂತಾಗಿದೆ. ಇಡೀ ಜಿಲ್ಲೆಯಲ್ಲಿ ಇದೊಂದೇ ಸರಕಾರಿ ಎಕ್ಸರೇ ಮೆಶಿನ ಇದ್ದು, ಇದು ಬಂದಾಗಿರುವುದರಿಂದ ಬಡಜನರಿಗೆ ಬಹಳ ತ್ರಾಸವಾಗುತ್ತಿದೆ. ಎಕ್ಸರೇಯ ಫೋಟೋ ತೊಳೆಯಲು ವಾಶಿಂಗ ಸೊಲ್ಯೂಶನ ಇಲ್ಲವೆಂದೂ, ಮೈಸೂರ ಸರಕಾರ, ಎಷ್ಟು ಪತ್ರ ಒರೆದರೂ ಕೂಡ, ಬೆಂಗಳೂರಿಂದ ಸೊಲ್ಯೂಶನ ಕಳುಹಿಸಿಕೊಡಲಿಲ್ಲವೆಂದೂ ದವಾಖಾನೆಯ ಅಧಿಕಾರಿಗಳು ಹೇಳುತ್ತಿರುವರು. ಮೈಸೂರ ಸರಕಾರದ ಆಡಳಿತೆ ಹೇಗೆ ನಡೆದಿದೆಂಬುದಕ್ಕೆ ಇದೊಂದು ಉದಾಹರಣೆ ಸಾಕು.

ಇದರಂತೆಯೇ ಬಿಜಾಪುರ ಜಿಲ್ಲೆಯ ಹಿಂದುಳಿದ ವರ್ಗಗಳ ಅಧಿಕಾರಿ ತೀರಿಕೊಂಡು 10 ತಿಂಗಳಾದರೂ ಕೂಡ, ಮೈಸೂರ ಸರಕಾರ ಮತ್ತೊಬ್ಬ ಅಧಿಕಾರಿಯನ್ನು ಈ ಜಾಗಕ್ಕೆ ಇನ್ನೂ ನೇಮಿಸಿಲ್ಲ. ಇದರಿಂದಾಗಿ ಹಿಂದುಳಿದ ವರ್ಗದವರಿಗೆ ಬಹಳ ಅನ್ಯಾಯ ಮಾಡಿದಂತಾಗಿದೆ.

ಗುಲ್ಬರ್ಗ

## ಮುಖ್ಯ ಮಂತ್ರಿಗೆ ಮನವಿಗಳು

ಮೈಸೂರು ಸರ್ಕಾರದ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಇತ್ತೀಚಿಗೆ ಗುಲ್ಬರ್ಗಕ್ಕೆ ಭೇಟಿಕೊಟ್ಟಾಗ ಗುಲ್ಬರ್ಗಾ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಒಂದು ಮನವಿಯನ್ನು ಕೊಡಲಾಯಿತು. ಅದರಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳೆ ಕೆಟ್ಟಿರುವುದರಿಂದ ಬಾಕಿ ಕಂದಾಯವನ್ನು ಮಾಫಿ ಮಾಡಬೇಕೆಂದು ಕೋರಲಾಗಿದೆ. ಚಿತ್ತಾಪುರ ತಾಲ್ಲೂಕಿನಲ್ಲಿ ಕಳೆದೈದು ವರ್ಷಗಳಲ್ಲಿ ಬೆಳೆ ಇಲ್ಲದ್ದರಿಂದ ಮೂರು ಸಲ ಕಂದಾಯ ಸಸ್ಪೆಂಡ್ ಮಾಡಲಾಗಿದೆಂದೂ, ಐದು ವರ್ಷದಲ್ಲಿ ಮೂರು ಸಲ ಕಂದಾಯ ಸಸ್ಪೆಂಡ್ ಮಾಡಿದರೆ ಅದನ್ನು ಮಾಫಿಮಾಡಬೇಕೆಂದು ಹೈದರಾಬಾದ್ ಸರಕಾರ ತೀರ್ಮಾನಿಸಿದ್ದು; ಈಗ ಮೈಸೂರು ಸರಕಾರ ಅದನ್ನು ಗಮನಿಸಿ ಬಾಕಿ ಕಂದಾಯವನ್ನು ಮಾಫಿ ಮಾಡಬೇಕೆಂದೂ ಮನವಿಯಲ್ಲಿ ಹೇಳಿದೆ. ಈಗ ಜೋಳದ ಬೆಲೆ ತೀವ್ರವಾಗಿ ಇಳಿದ್ದು ರೈತರಿಗೆ ಹಾನಿಯಾಗಿರುವುದರಿಂದ ಸರಕಾರ ಜೋಳದ ಬೆಲೆ ನಿಗದಿಮಾಡಿ ರೈತರ ಹಿತ ರಕ್ಷಿಸಬೇಕೆಂದೂ ಹೇಳಲಾಗಿದೆ.

## ಪಿ. ಡಬ್ಲ್ಯು. ಡಿ. ಕೆಲಸಗಾರರ ಸಂಘದ ಮನವಿ

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಕೆಲಸಗಾರರ ಸಂಘದ ಪರವಾಗಿ ಗೋಪಾಲರಾವ್ ಕೆನಿಕರ್, ಅಬ್ದುಲ್ ಕರೀಂ ಮತ್ತು ಅಡಿವೆಪ್ಪನವರು ಒಂದು ಮನವಿಯನ್ನು ಕೊಟ್ಟು ಅದರಲ್ಲಿ ಕೆಳಗಿನ ಬೇಡಿಕೆಯನ್ನಿಡಲಾಗಿದೆ:

1. ಮೈಸೂರು ಸರಕಾರದ ಪುನರ್ವಿಮರ್ಶಿತ ಸಂಬಳ ಸ್ಕೇಲನ್ನು ಕೂಡಲೇ ಜಾರಿಗೆ ತರತಕ್ಕದ್ದು.
2. 1955ರಿಂದ ಕೆಲಸದಿಂದ ನಿವೃತ್ತರಾಗಿದ್ದ ಕೆಲಸಗಾರರಿಗೆ ಗ್ರಾಟ್ಯುಯಿಟಿ ಕೊಡಬೇಕು.
3. 1953 ರಿಂದ ಗ್ರೇಡ್ ಪ್ರಕಾರ ಇಂಕ್ರಿಮೆಂಟನ್ನು ಕೂಡಲೇ ಕೊಡಬೇಕು.
4. ಹುಡುಗರನ್ನು ಕೂಲಿಗಳಾಗಿ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು.
5. ಎಲ್ಲ ಪಿ.ಡಬ್ಲ್ಯು.ಡಿ. ಕೆಲಸಗಾರರನ್ನು, ಮೇಸ್ತ್ರಿಗಳನ್ನು ಪರ್ಮನೆಂಟ್ ಮಾಡಬೇಕು.
6. ಸಂಘವನ್ನು ಮಾನ್ಯ ಮಾಡಬೇಕು
7. ರಾಯಚೂರು ವಿಭಾಗದ ಪಿ. ಡಬ್ಲ್ಯು. ಡಿ. ಎಂಜಿನಿಯರ್ ಅವರು ಸಂಘದ ಅಧ್ಯಕ್ಷರೊಡನೆ ದರ್ಪದಿಂದ ವರ್ತಿಸಿದ್ದು ಇನ್ನು ಮುಂದೆ ಅಧಿಕಾರಿಗಳು ಆ ರೀತಿ ನಡೆಯುವುದನ್ನು ನಿಲ್ಲಿಸಬೇಕು

ಕೆಲಸಗಾರರ ಸಹಕಾರ ದೊರೆಯಲು ಸರ್ಕಾರ ಕೂಡಲೇ ಈ ಕ್ರಮಗಳನ್ನು ಕೈಗೆದುಕೊಳ್ಳಬೇಕೆಂದು ಮನವಿಯಲ್ಲಿ ಹೇಳಲಾಗಿದೆ.

## ಮೈಸೂರು ಸ್ಟೇಟ್ ಸಿವಿಕ್ ಫೋರಂನ ರಚನೆ

ಕಳೆದ ತಾ. 22, 23ರಂದು ಮೈಸೂರಿನಲ್ಲಿ ಬೆಂಗಳೂರು ಮತ್ತು ಮೈಸೂರು ನಗರ ಸಭೆಗಳ ವಿರೋಧ ಪಕ್ಷಗಳ ಪ್ರತಿನಿಧಿಗಳ ಸಭೆಸೇರಿ, ವಿರೋಧ ಪಕ್ಷಗಳಿಗೆ ನಗರ ಸಭೆಗಳಲ್ಲಿ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಪಡೆಯುವ ಉದ್ದಿಶ್ಯದಿಂದ "ಮೈಸೂರು ಸ್ಟೇಟ್ ಸಿವಿಕ್ಸ್ ಫೋರಂ" ಎಂಬ ಸಂಸ್ಥೆಯನ್ನು ರಚಿಸಬೇಕೆಂದು ತೀರ್ಮಾನವಾಗಿದೆ.

ನಗರ ಸಭೆಗಳಲ್ಲಿರುವ ಕಾಂಗ್ರೆಸ್ಸೇತರ ಸದಸ್ಯರೊಳಗೆ ಪರಸ್ಪರ ಸಂಬಂಧ ಕಲ್ಪಿಸಿ, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ದೊರೆಯಬೇಕೆಂದೂ, ಆ ಸಂಸ್ಥೆಗಳು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯಬೇಕೆಂದೂ ಸಭೆ ಅಭಿಪ್ರಾಯ ಪಟ್ಟಿತು. ಈ ಗುರಿಯನ್ನು ಮುಟ್ಟಲು ಪರಸ್ಪರ ಸಹಕರಿಸುವುದು ಅಗತ್ಯವೆಂದು ಅಭಿಪ್ರಾಯ ಪಟ್ಟಿದೆ. ಇದರಿಂದ ವಿವಿಧ ಪಕ್ಷಗಳ ನೀತಿಧೋರಣೆಗಳಿಗೆ ಯಾವ ರೀತಿಯ ಆತಂಕವೂ ಆಗದೆಂದು ಅಭಿಪ್ರಾಯಪಟ್ಟಿದೆ. ಮೈಸೂರು ರಾಜ್ಯದ ಎಲ್ಲ ನಗರ ಸಭೆಗಳ ಕಾಂಗ್ರೆಸ್ಸೇತರ ಸದಸ್ಯರುಗಳ ಸಮ್ಮೇಳನವನ್ನು ಮೇ ತಿಂಗಳಲ್ಲಿ ಕರೆಯಲು 9 ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಅದರ ಕಚೇರಿಯು ಬೆಂಗಳೂರಲ್ಲಿರಬೇಕೆಂದೂ, ಬೆಂಗಳೂರು ಕಾರ್ಪೊರೇಷನ್‌ನ ವಿರೋಧ ಪಕ್ಷದ ನಾಯಕರಾದ ಎನ್. ಆರ್. ಮೂರ್ತಿಯವರು ಅದರ ಜವಾಬ್ದಾರಿ ವಹಿಸಬೇಕೆಂದೂ ತೀರ್ಮಾನವಾಯಿತು.

ಇನ್ನೊಂದು ನಿರ್ಣಯದಲ್ಲಿ ಅಗ್ಗ ದರದ ಆಹಾರ ಧಾನ್ಯದ ಅಂಗಡಿಗಳನ್ನು ಮುಂದುವರಿಸಬೇಕೆಂದು ಕೇಂದ್ರ ಸರಕಾರಕ್ಕೆ ಕೇಳಿಕೊಳ್ಳಲಾಗಿದೆ. ಮತ್ತು ನೀರಿನ ಯೋಜನೆಗೂ, ಒಳ ಚರಂಡಿ ವ್ಯವಸ್ಥೆಗೂ ಆರೋಗ್ಯಾಭಿವೃದ್ಧಿಗೂ ಭಾರತ ಸರಕಾರ ಈ ನಗರ ಸಭೆಗಳಿಗೆ ಹೆಚ್ಚು ಸಹಾಯ ನೀಡಬೇಕೆಂದು ಕೋರಲಾಗಿದೆ. ಮೈಸೂರು ಸರ್ಕಾರ ವಿದ್ಯುಚ್ಛಕ್ತಿ ದರವನ್ನೇರಿಸಲು ಕೊಟ್ಟಿರುವ ಸೂಚನೆಯನ್ನು ಖಂಡಿಸುವ ಮತ್ತು ಮೈಸೂರು—ಬೆಂಗಳೂರು ನಗರಗಳಲ್ಲಿ ಓಡಾಡುವ ಸರಕಾರಿ ಬಸ್ಸುಗಳಿಂದ ಬರುವ ಲಾಭವನ್ನು ಆಯಾ ನಗರ ಸಭೆಗಳಿಗೆ ಕೊಡಬೇಕೆನ್ನುವ ನಿರ್ಣಯಗಳಾದವು. ಮೈಸೂರು ಮತ್ತು ಬೆಂಗಳೂರು ನಗರ ಸಭೆಗಳಲ್ಲಿ ವಿವಿಧ ಸಮಿತಿಗಳಿಗೆ ನಡೆಯುವ ಚುನಾವಣೆಗಳ ಪದ್ಧತಿಯು ಎಲ್ಲ ಪಕ್ಷಗಳಿಗೂ ಸಮಾನವಾದ ಮತ್ತು ಯೋಗ್ಯವಾದ ಪ್ರಾತಿನಿಧ್ಯವನ್ನು ಕೊಡಲು ಸಹಾಯಕವಾಗದಿರುವುದರಿಂದ ಈಗಿನ ಪದ್ಧತಿಯ ಬದಲು ಪ್ರೊಪೋರ್ಶನಲ್ ರೆಪ್ರಸೆಂಟೇಶನ್ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ತೀರ್ಮಾನಿಸಲಾಯಿತು. ನಗರ ಸಭೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಮೈಸೂರು ಸರಕಾರವನ್ನು ಕೇಳಲಾಗಿದೆ.

## ಕೊಲ್ಲೂರು ಗ್ರಾಮದ ಕಮ್ಯೂನಿಸ್ಟ್ ಪಾರ್ಟಿ ಸಭೆ

ಗುಲ್ಬರ್ಗಾ ಜಿಲ್ಲೆಯ, ಚಿತ್ತಾಪುರ ತಾಲೂಕು, ಕೊಲ್ಲೂರು ಗ್ರಾಮದ ಕಮ್ಯೂನಿಸ್ಟ್ ಪಾರ್ಟಿ ಶಾಖೆಯ ಆಶ್ರಯದಲ್ಲಿ ತಾ. 21—2—58ರಂದು ಶ್ರೀ ಚಂದಪ್ಪ ಲೋಕರೆಯವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆ ನಡೆದು ಕೆಳಗಿನ ನಿರ್ಣಯಗಳನ್ನು ಮಾಡಿದೆ:

1) ಗ್ರಾಮದ ರೈತರ ಪರಿಸ್ಥಿತಿ ಕೆಟ್ಟದ್ದರಿಂದ, ಬೆಳೆ ನಾಶವಾಗಿರುವುದರಿಂದ ಹಿಂದಿನ ಬಾಕಿ ಕಂದಾಯವನ್ನು ಮಾಫಿ ಮಾಡಬೇಕು.

2) ಈ ಸಲ ಜೋಳದ ಬೆಲೆ ಇಳಿಯುತ್ತಿದ್ದುದರಿಂದ ರೈತರಿಗೆ ತುಂಬಾ ನಷ್ಟವಾಗುತ್ತಿದೆ. ಆದ್ದರಿಂದ ಸರಕಾರ ಜೋಳದ ದರವನ್ನು ಪಲ್ಲ ಒಂದಕ್ಕೆ ರೂ. 35 ನಿಶ್ಚಯಿಸಿ ಸರಕಾರವೇ ಖರೀದಿ ಮಾಡಿ ಅಭಾವದ ಕಾಲದಲ್ಲಿ ರೈತರಿಗೆ ಒದಗಿಸಬೇಕು.

3) ಗ್ರಾಮ ಪಂಚಾಯ್ತಿ ಚುನಾವಣೆಯನ್ನು ಕೂಡಲೇ ನಡಿಸಬೇಕು. ಈ ನಿರ್ಣಯಗಳನ್ನು ಮುಖ್ಯ ಮಂತ್ರಿಗಳಿಗೂ ಅಸೆಂಬ್ಲಿ ಅಧ್ಯಕ್ಷರಿಗೂ ಕಳಿಸಲಾಗಿದೆ.

## ಮೌಲಾನಾ ಆಜಾದರ ನಿಧನ

ಕೇಂದ್ರ ಸಂಪುಟದಲ್ಲಿ ವಿದ್ಯಾ ಸಚಿವರಾಗಿದ್ದ ಶ್ರೀ ಮೌಲಾನಾ ಅಬುಲ್ ಕಲಾಂ ಆಜಾದ್‌ರವರು ಪಾರ್ಶ್ವ ವಾಯುವಿನಿಂದ ಅಸ್ವಸ್ಥರಾಗಿದ್ದು ಫೆಬ್ರುವರಿ ೨೨ರಂದು ಬೆಳಗಿನ ಜಾವ ೨-೧೫ಕ್ಕೆ ನಿಧನರಾದರು. ಅವರಿಗೆ ೬೯ ವರ್ಷ ವಯಸ್ಸಾಗಿತ್ತು.

ಮೌಲಾನಾ ಆಜಾದರು ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಒಬ್ಬರು. ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಶ್ರಮಿಸುತ್ತಿದ್ದು, ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಆಜಾದರ ಪಾತ್ರವನ್ನು ಯಾರೂ ಮರೆಯುವಂತಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಆಜಾದರು ಕೇಂದ್ರ ಸಂಪುಟದಲ್ಲಿ ವಿದ್ಯಾ ಸಚಿವರಾಗಿದ್ದು, ರಾಷ್ಟ್ರ ಸೇವೆಯನ್ನು ಮಾಡಿದ್ದಾರೆ. ಇವರ ನಿಧನದಿಂದ ದೇಶಕ್ಕೆ ಅಪಾರವಾದ ನಷ್ಟ ಸಂಭವಿಸಿದೆ. ಇವರ ನಿಧನಕ್ಕಾಗಿ 'ಜನಶಕ್ತಿ' ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

## ಓದುಗರ ಓಲೆ

### ನಮ್ಮ ಕಾಂಗ್ರೆಸ್ಸಿಗರ ಅಜ್ಞಾನ!

ಗೌರೀಬಿದನೂರು ತಾಲ್ಲೂಕು ಕಾಂಗ್ರೆಸ್ ಆಫೀಸಿನ ಕಟ್ಟಡದ ಮೇಲೆ ತಾ. 23-2-58ರಲ್ಲಿ ದೇಶದ ಮಹಾವ್ಯಕ್ತಿ ಮತ್ತು ಕೇಂದ್ರದ ವಿದ್ಯಾ ಸಚಿವರಾದ ಅಬುಲ್ ಕಲಾಮ್ ಆಜಾದ್‌ರವರ ನಿಧನದ ಸಂತಾಪ ಸೂಚನೆಯ ಬಗ್ಗೆ ರಾಷ್ಟ್ರಧ್ವಜವನ್ನು ಅರ್ಧ ಹಾರಿಸುವ ಬದಲು ಪೂರ್ತಿ ಹಾರಿಸಿದ್ದಾರೆ. ಇದು ನ್ಯಾಯವೇ? ಸರ್ಕಾರಿ ಅಧಿಕಾರಿಗಳು ಬಂದು ಸೂಚಿಸಿದರೂ ಸಹ ಕಾಂಗ್ರೆಸ್ ಭಕ್ತರು ಸುಮ್ಮನಿರುವುದು ಗೌರವವೇ?

# ರೂ. ೨೦೦೦ ಪಾರ್ಟಿ ನಿಧಿಗೆ ಸಹಾಯ ನೀಡಿರಿ

ಕಳೆದ ತಿಂಗಳು ಮಂಗಳೂರಲ್ಲಿ ನಡೆದ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನದಲ್ಲಿ ಮೇ ಒಂದರೊಳಗೆ ಪ್ರಾಂತಸಮಿತಿಗೆ ರೂ. 2,000ದ ನಿಧಿಯನ್ನು ಕೂಡಿಸಬೇಕೆಂದು ತೀರ್ಮಾನವಾಗಿದೆ. ಇದು ಎಷ್ಟು ಮಹತ್ವದ್ದೆಂಬುದನ್ನು ಒತ್ತಿ ಹೇಳುವ ಅವಶ್ಯಕತೆ ಇಲ್ಲ.

ಈಗ ನಮ್ಮ ಪ್ರಾಂತದ ಪರಿಸ್ಥಿತಿಯಲ್ಲಿ ಬಹಳ ಬದಲಾವಣೆಯಾಗಿದೆ. ಜನರಲ್ಲಿ ಪಾರ್ಟಿಯ ಬಗ್ಗೆ ಹೆಚ್ಚಿನ ಆಸಕ್ತಿ ಕಂಡು ಬರುತ್ತಿದೆ. ಎಲ್ಲ ಕಡೆಗಳಲ್ಲೂ ಪಾರ್ಟಿ ಚಟುವಟಿಕೆ ಹೆಚ್ಚುತ್ತಿದೆ. ಪಾರ್ಟಿ ಸದಸ್ಯರ ಸಂಖ್ಯೆ ದ್ವಿಗುಣವಾಗಿರುವುದಲ್ಲದೆ ಇನ್ನೂ ಹೆಚ್ಚಿಸಲು ಸಾಧ್ಯವಿದೆ. ಹೊಸ ಪ್ರದೇಶಗಳಲ್ಲೂ, ಹೊಸ ಜನ ವಿಭಾಗಗಳಲ್ಲೂ ಪಾರ್ಟಿಯ ಪ್ರಭಾವ ಬೆಳೆಯುತ್ತಿದೆ.

ಪ್ರಾಂತ ಸಮಿತಿಯು ಈ ಜವಾಬ್ದಾರಿಯನ್ನು ನಿರ್ವಹಿಸಲು, ಪಾರ್ಟಿಯ ಮುಖಪತ್ರವಾದ ಜನಶಕ್ತಿಯನ್ನು ಯಶಸ್ವಿಯಾಗಿ ನಡೆಸಲು, ಪಾರ್ಟಿಯನ್ನು ಇನ್ನೂ ಹೆಚ್ಚು ಬಲಗೊಳಿಸಲು ಹಣ ಬಹಳ ಅಗತ್ಯ. ಈ ಪರಿಸ್ಥಿತಿಯನ್ನು ಮನಗಂಡು ಸಮ್ಮೇಳನವು ರೂ. 2,000ದ ನಿಧಿಗೆ ಕರೆ ಕೊಟ್ಟಿರುತ್ತದೆ.

ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿಗಳು ತಮ್ಮ ಚಟುವಟಿಕೆಗಳಿಗೆ ನಿಧಿ ಶೇಖರಣೆಯನ್ನು ಯಶಸ್ವಿಯಾಗಿ ನಡೆಸುತ್ತಿವೆ. ಇದು ಸ್ವಾಗತಾರ್ಹವಾಗಿದೆ. ಅದರೊಂದಿಗೆ ಪ್ರಾಂತ ಸಮಿತಿಗೂ ನಿಧಿ ಕೂಡಿಸುವುದು ಎಲ್ಲ ಘಟಕಗಳ ಮತ್ತು ಸದಸ್ಯರ ಕರ್ತವ್ಯವಾಗಿದೆ. ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಒಪ್ಪಿಕೊಂಡ ಕೋಟಾಗಳು ಈ ರೀತಿ ಇವೆ:

ಮಂಗಳೂರು ರೂ. 300; ಬಳ್ಳಾರಿ ರೂ. 100; ಶಿವಮೊಗ್ಗ ರೂ. 110; ಕೋಲಾರ ರೂ. 500; ಗುಲ್ಬರ್ಗಾ ರೂ 200; ಬೆಳಗಾಂ ರೂ. 50; ಬೆಂಗಳೂರು ರೂ. 200; ಕೊಡಗು ರೂ.100; ತುಮಕೂರು ರೂ. 100; ಚಿತ್ರದುರ್ಗ ರೂ. 50; ಕಾರವಾರ ರೂ 50; ಬಿಜಾಪುರ ರೂ. 50; ಚಿಕ್ಕಮಗಳೂರು ರೂ. 50; ಹಾಸನ ರೂ. 50; ಇತರರು ರೂ. 90. ಇದರಲ್ಲಿ ಕೆಲವರು ಒಂದು ತಿಂಗಳೊಳಗೂ, ಇನ್ನು ಕೆಲವರು ಮಾರ್ಚಿನೊಳಗೂ, ಮತ್ತಿತರರು ಮೇ ಒಂದರೊಳಗೂ ನಿಧಿಯನ್ನು ಪ್ರಾಂತ ಸಮಿತಿಗೆ ಒಪ್ಪಿಸುವುದಾಗಿ ವಾಗ್ದಾನ ಮಾಡಿದ್ದಾರೆ.

ನಮ್ಮ ಈ ಕರೆಯು ಬಹಳ ಸಣ್ಣ ಪ್ರಮಾಣದ್ದಾಗಿದೆ. ಇದನ್ನು ಅವಧಿಯೊಳಗೆ ಪೂರೈಸಲು ಎಲ್ಲ ಪಾರ್ಟಿ ಘಟಕಗಳೂ, ಪಾರ್ಟಿ ಸದಸ್ಯರೂ, ಹಿತೈಷಿಗಳೂ ದುಡಿದು ನಮ್ಮ ಪ್ರಯತ್ನವನ್ನು ಯಶಸ್ವಿಗೊಳಿಸಬೇಕೆಂದು ಪ್ರಾಂತ ಸಮಿತಿಯು ವಿನಂತಿಸುತ್ತದೆ. ಹಣ ವಸೂಲಾದ ಬಗ್ಗೆ ಪ್ರಾಂತ ಸಮಿತಿಗೆ ಆಗಿಂದಾಗ್ಗೆ ತಿಳಿಸಬೇಕೆಂದೂ ಅದರ ವರದಿಯನ್ನು ಜನಶಕ್ತಿಗೂ ಕಳಿಸಬೇಕೆಂದೂ ವಿನಂತಿಸುತ್ತೇವೆ. ಇದರೊಂದಿಗೆ ಪಾರ್ಟಿ ಸದಸ್ಯರನ್ನು ಸೇರಿಸುವುದಕ್ಕೂ, ಜನಶಕ್ತಿ ಮಾರಾಟವನ್ನು ಹೆಚ್ಚಿಸುವುದಕ್ಕೂ, ಪಾರ್ಟಿ ಸಾಹಿತ್ಯದ ಮಾರಾಟಕ್ಕೂ ಎಲ್ಲರೂ ತೀವ್ರ ಗಮನ ಕೊಡುವುದಗತ್ಯ.

ಭಾರತ ಕಮ್ಯೂನಿಸ್ಟ್ ಪಾರ್ಟಿ
ಕರ್ನಾಟಕ ಪ್ರಾಂತ ಸಮಿತಿ

# ★ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಹೊಸ ಘಟನೆಯ ಪೀಠಿಕೆ

[ಭಾರತ ಕಮ್ಯೂನಿಸ್ಟ್ ಪಾರ್ಟಿಯ ಹೊಸ ಘಟನೆಯ ಕರಡು ಪ್ರಕಟವಾಗಿದೆ. ಅದರ ಪೀಠಿಕೆಯನ್ನು ಕೆಳಗಡೆ ಕೊಡಲಾಗಿದೆ. ಕಮ್ಯೂನಿಸ್ಟ್ ಪಾರ್ಟಿಯ ಉದ್ದೇಶ, ಕಾರ್ಯಕ್ರಮ, ಹಾಗೂ ಸಂಘಟನೆಯ ಬುನಾದಿ ತತ್ವಗಳನ್ನು ಈ ಪೀಠಿಕೆಯಲ್ಲಿ ನಿರ್ದೇಶಿಸಲಾಗಿದೆ.]

★

## ಸ್ವಾತಂತ್ರ್ಯ ಸಮರದಲ್ಲಿ ಹುಟ್ಟಿದ ಶ್ರಮಜೀವಿ ವರ್ಗದಪಕ್ಷ

ಭಾರತ ಕಮ್ಯೂನಿಸ್ಟ್ ಪಾರ್ಟಿಯು ಭಾರತದ ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾಗಿದೆ. ಕಾರ್ಮಿಕ ವರ್ಗದ ಅತ್ಯಂತ ಉನ್ನತವಾದ ವರ್ಗ ಸಂಘಟನೆಯಾಗಿದೆ. ಅದು ಕಾರ್ಮಿಕರ, ರೈತರ ಮತ್ತಿತರ ಸರ್ವಸಾಮಾನ್ಯ ಶ್ರಮಜೀವಿಗಳ ಕ್ರಾಂತಿಕಾರಿ ಸಂಘಟನೆಯಾಗಿದ್ದು, ಸಮಾಜವಾದದ ಉದ್ದೇಶದಲ್ಲಿ ನಿಷ್ಠೆಯುಳ್ಳದ್ದಾಗಿದೆ.

ಭಾರತ ಕಮ್ಯೂನಿಸ್ಟ್ ಪಾರ್ಟಿಯು ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಹುಟ್ಟಿತು. ಅಕ್ಟೋಬರ ಮಹಾ ಕ್ರಾಂತಿಯಿಂದ ಹೊಂದಿದ ಸ್ಫೂರ್ತಿಯಿಂದ, ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆಯಲು ಹೊಸ ಮಾರ್ಗಗಳನ್ನು ಹುಡುಕುತ್ತಿದ್ದ ಭಾರತದ ಕ್ರಾಂತಿಕಾರಿಗಳ ಪ್ರಯತ್ನದ ಫಲವಾಗಿ ಭಾರತದ ಕಮ್ಯೂನಿಸ್ಟ್ ಪಾರ್ಟಿ ಉದ್ಭವಿಸಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಉದ್ದೇಶವನ್ನು ಮೊತ್ತಮೊದಲಿಗೆ ನಮ್ಮ ಜನರ ಮುಂದೆ ಇರಿಸಿದ ಸಂಘಟಿತ ಶಕ್ತಿಗಳಲ್ಲೊಂದು ಭಾರತ ಕಮ್ಯೂನಿಸ್ಟ್ ಪಾರ್ಟಿ. ಅದು ನಮ್ಮ ದೇಶದಲ್ಲಿ ಸಮಾಜವಾದದ ಬಾವುಟವನ್ನು ಮೊತ್ತಮೊದಲು ಎತ್ತಿದ ಪಕ್ಷ. ಅದು ನಮ್ಮ ವಿಮೋಚನಾ ಹೋರಾಟಕ್ಕೆ ಒಂದು ಸರಿಯಾದ ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಕ್ರಮವನ್ನು ಕೊಟ್ಟು, ಆ ಹೋರಾಟ ಸರ್ವವ್ಯಾಪಕವಾಗುವಂತೆ ಅವಿಶ್ರಾಂತವಾಗಿ ಪ್ರಯತ್ನಿಸಿದೆ. ಭಾರತದ ಸ್ವಾತಂತ್ರ್ಯದ ಧ್ಯೇಯವನ್ನು ಸ್ಥಿರವಾಗಿ ಎತ್ತಿಹಿಡಿಹಿಡಿದುದಕ್ಕೆ, ಶೋಷಣೆಗೆ ವಿರೋಧವಾಗಿ ಕಾರ್ಮಿಕರ ಮತ್ತು ರೈತರ ಅಸಂಖ್ಯಾತ ಹೋರಾಟಗಳ ನೇತೃತ್ವ ವಹಿಸಿದುದಕ್ಕೆ, ಕಾರ್ಮಿಕ ವರ್ಗಕ್ಕೂ ಜನತೆಗೂ ಸಮಾಜವಾದದ ಸಂದೇಶವನ್ನು ಸಾರಿದುದಕ್ಕೆ, ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪಕರೂ, ಸದಸ್ಯರೂ ದೀರ್ಘಕಾಲ ಬಂಧನಗಳಿಗೆ ಗುರಿಯಾಗಿದ್ದಾರೆ. ಜನರ ಸೇವೆ ಮಾಡುವ ಧೈರ್ಯ ತೋರಿಸಿದ್ದಕ್ಕೆ ಅನೇಕರು ಪ್ರಾಣ ಬಲಿದಾನ ಮಾಡಬೇಕಾಗಿ ಬಂದಿದೆ. ಧೈರ್ಯ ಹಾಗು ತ್ಯಾಗಶೀಲತೆಯ ಸ್ವಭಾವದಿಂದ ಕಾರ್ಮಿಕ ವರ್ಗದ ಮತ್ತು ರೈತಾಂಗದ ಅತ್ಯುತ್ತಮ ಸಂತಾನಗಳನ್ನು, ಶ್ರಮಜೀವಿ ಜನಕೋಟಿಯ ಹೋರಾಟಗಳಲ್ಲಿ ಪಳಗಿ ಉಕ್ಕಿನಂತಾದವರನ್ನು, ಬುದ್ಧಿಜೀವಿಗಳಲ್ಲಿ ಅತ್ಯುತ್ತಮ ಜನರನ್ನು ಕಮ್ಯೂನಿಸ್ಟ್ ಪಾರ್ಟಿಯು, ಧೈರ್ಯ ಹಾಗೂ ತ್ಯಾಗಶೀಲತೆಯಿಂದ, ತನ್ನ ಧ್ವಜದ ನೆರಳಿಗೆ ಆಕರ್ಷಿಸಿದೆ.

ನಿರಂತರವಾಗಿ ಜನಸಮೂಹದ ಸೇವೆ ಮಾಡಿ, ಧೈರ್ಯದಿಂದ ಸಮಾಜವಾದದ, ಸ್ವಾತಂತ್ರ್ಯದ ಹಾಗೂ ಸ್ವಾವಲಂಬನೆಯ ಉದ್ದೇಶಕ್ಕೆ ಹೋರಾಡಿ, ಕಮ್ಯೂನಿಸ್ಟ್ ಪಾರ್ಟಿಯು ಬೆಳೆದಿದೆ, ಈಗಿನ ಶಕ್ತಿಯನ್ನು ಪಡೆದಿದೆ.

## ಉದ್ದೇಶ ಮತ್ತು ಕಾರ್ಯಕ್ರಮ

ಶ್ರಮಜೀವಿ ವರ್ಗವು ಅಧಿಕಾರವನ್ನು ಹೊಂದುವುದು, ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು, ಸಮಾಜಸತ್ತೆಯನ್ನೂ ಕಮ್ಯೂನಿಸಮನ್ನೂ ಸಾಧಿಸುವುದು ಭಾರತ ಕಮ್ಯೂನಿಸ್ಟ್ ಪಾರ್ಟಿಯ ಉದ್ದೇಶವಾಗಿದೆ

ಈ ಉದ್ದೇಶಗಳನ್ನು ಸಾಧಿಸುವ ದೃಷ್ಟಿಯಿಂದ ಹಾಗೂ ನಮ್ಮ ಜನರನ್ನು ಇದಿರಿಸುತ್ತಿರುವ ತಕ್ಷಣದ ಕರ್ತವ್ಯಗಳನ್ನು ಗಣನೆಗೆ ತೆಗೆದುಕೊಂಡು—ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೆ ಮತ್ತು ಭದ್ರಪಡಿಸುವುದಕ್ಕೆ, ದೇಶದ ಆರ್ಥಿಕ ಸ್ಥಿತಿಯನ್ನು ಬಲಗೊಳಿಸುವುದಕ್ಕೆ, ಪ್ರಜಾಪ್ರಭುತ್ವವನ್ನು ಸರ್ವಮುಖವಾಗಿ ವಿಸ್ತರಿಸುವುದಕ್ಕೆ, ಪಾಳೆಯಗಾರತನದ ಉಳಿದ ಅಂಶಗಳನ್ನೆಲ್ಲ ತೊಡೆದು ಹಾಕುವುದಕ್ಕೆ, ಆರ್ಥಿಕ-ಸಾಂಸ್ಕೃತಿಕ-ಸಾಮಾಜಿಕ ಕ್ಷೇತ್ರಗಳಲ್ಲಿರುವ ವಿದೇಶೀ ಆಳ್ವಿಕೆಯ ಕೆಟ್ಟ ಫಲಿತಾಂಶಗಳನ್ನು ನಿವಾರಿಸುವುದಕ್ಕೆ ನಡೆಯುವ ಹೋರಾಟದಲ್ಲಿ ದೇಶದೊಳಗಿನ ಎಲ್ಲ ದೇಶಪ್ರೇಮಿಗಳೂ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನೂ ಐಕ್ಯಗೊಳಿಸಿ ಮುನ್ನಡೆಸಲು ಭಾರತ ಕಮ್ಯೂನಿಸ್ಟ್ ಪಾರ್ಟಿಯು ಪ್ರಯತ್ನಿಸುತ್ತದೆ.

ಭಾರತ ಕಮ್ಯೂನಿಸ್ಟ್ ಪಾರ್ಟಿ ಜನಸಮೂಹದ ಜೀವಾಧಾರ ಹಿತಗಳನ್ನು ರಕ್ಷಿಸುತ್ತದೆ; ಜನರ ಜೀವನದ ಸ್ಥಿತಿಯನ್ನು ನಿರಂತರವಾಗಿ ಉತ್ತಮಗೊಳಿಸಲು ಹೋರಾಡುತ್ತದೆ; ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳ ವಿರೋಧ ಹೋರಾಡುತ್ತದೆ. ಕೋಮುವಾರು, ಜಾತೀಯತೆ, ಅಸ್ಪೃಶ್ಯತೆ ಹಾಗೂ ಸ್ತ್ರೀಯರಿಗೆ ಸಮಾನತೆ ನಿಷೇಧಿಸುವುದೇ ಮೊದಲಾದ ಪ್ರತಿಗಾಮಿ ಭಾವನೆಗಳನ್ನೂ ನಡವಳಿಕೆಗಳನ್ನೂ ಕಮ್ಯೂನಿಸ್ಟ್ ಪಾರ್ಟಿ ವಿರೋಧಿಸುತ್ತದೆ.

ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಸಾಧಿಸಲ್ಪಟ್ಟಿರುವ ದೇಶದ ಮತ್ತದರ ಜನರ ಐಕ್ಯತೆಯನ್ನೂ ಸೌಹಾರ್ದತೆಯನ್ನೂ ರಕ್ಷಿಸಲು ಭಾರತ ಕಮ್ಯೂನಿಸ್ಟ್ ಪಾರ್ಟಿ ಪ್ರತಿಜ್ಞೆ ಮಾಡಿದೆ. ಐಕ್ಯ ಮುರಿಯುವ ಎಲ್ಲ ವಿಚಾರಗಳನ್ನೂ ಚಳುವಳಿಗಳನ್ನೂ ಕಮ್ಯೂನಿಸ್ಟ್ ಪಾರ್ಟಿ ವಿರೋಧಿಸುತ್ತದೆ. ಭಾರತದ ಐಕ್ಯತೆಯ ಖಂಡಿತವಾದ ತಳಹದಿಯಾಗಿ ಎಲ್ಲ ಭಾಷಾವಾರು ಪ್ರದೇಶಗಳ ಜನರ ಸಮಾನತೆಗೆ, ಎಲ್ಲರೊಡನೆ ಸಮಾನವಾಗಿ ವ್ಯವಹರಿಸುವುದಕ್ಕೆ, ಕಮ್ಯೂನಿಸ್ಟ್ ಪಾರ್ಟಿ ಹೋರಾಡುತ್ತದೆ.

ಭಾರತ ಕಮ್ಯೂನಿಸ್ಟ್ ಪಾರ್ಟಿಯು ಶಾಂತಿಯ ಸಲುವಾಗಿ ಹೋರಾಡುತ್ತದೆ; ಎಲ್ಲ ರಾಷ್ಟ್ರಗಳೂ ಜನಾಂಗಗಳೂ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಸಮಾನತೆಯ ತಳಹದಿಯಲ್ಲಿ ಶಾಂತಿಯುತವಾಗಿ ಸಹಕರಿಸುವುದಕ್ಕೆ ಹೋರಾಡುತ್ತದೆ.

## ಮಾರ್ಕ್ಸಿಸಂ—ಲೆನಿನಿಸಂ ತಾತ್ವಿಕ ಬುನಾದಿ

ಭಾರತ ಕಮ್ಯೂನಿಸ್ಟ್ ಪಾರ್ಟಿಯು ಅದರ ತಕ್ಷಣದ ಹೋರಾಟಗಳಲ್ಲಿ ಹಾಗೂ ಅಂತಿಮ ಉದ್ದೇಶಗಳಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ತತ್ವ ಮತ್ತು ಮೂಲಭೂತ ಸಿದ್ಧಾಂತಗಳಿಂದ ಮಾರ್ಗದರ್ಶನ ಪಡೆಯುತ್ತದೆ. ಒಂದು ವರ್ಗದ ಮೇಲೆ ಒಂದು ವರ್ಗ ಆಧಿಪತ್ಯ ನಡೆಸುವುದನ್ನು ಕೊನೆಗಾಣಿಸಿ ಸಮಾಜವಾದೀ ಸಮಾಜವನ್ನು ಸ್ಥಾಪಿಸಲು ಶ್ರಮಜೀವಿ ಜನಸಮುದಾಯಕ್ಕೆ ಮಾರ್ಕ್ಸ್‌ವಾದ-ಲೆನಿನ್‌ವಾದವೊಂದೇ ಸರಿಯಾದ ಮಾರ್ಗವನ್ನು ತೋರಿಸುತ್ತದೆ. ಎಲ್ಲ ರೀತಿಯ ಪುನರ್ ಪರಿಶೀಲನಾವಾದ, ಹಠವಾದ ಹಾಗೂ ಪಂಥವಾದಗಳು ತಲೆ ಎತ್ತುವುದನ್ನು ಭಾರತ ಕಮ್ಯೂನಿಸ್ಟ್ ಪಾರ್ಟಿ ವಿರೋಧಿಸುತ್ತದೆ.

ಭಾರತದ ಪರಿಸ್ಥಿತಿಯ ನಿಜಸ್ಥಿತಿಗಳನ್ನೂ ಭಾರತದ ಚರಿತ್ರೆಯ ಅನುಭವವನ್ನೂ, ಭಾರತ ಜನತೆಯ ಪಾರಂಪರ್ಯಗಳನ್ನೂ ಭಾರತದ ರಾಷ್ಟ್ರೀಯ ವೈಶಿಷ್ಟ್ಯಗಳನ್ನೂ ಮಾರ್ಕ್ಸ್‌ವಾದ - ಲೆನಿನ್‌ವಾದದ ತತ್ವಗಳೊಡನೆ ಒಂದುಗೂಡಿಸಿ, ಭಾರತ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಧೋರಣೆಗಳನ್ನು ನಿರ್ಣಯ ಮಾಡುತ್ತದೆ. ಅದು ಜನತೆಯ ಹಿತಗಳಿಗೂ ಅವಶ್ಯಕತೆಗಳಿಗೂ ಅನುಗುಣವಾಗಿ ತನ್ನ ಧೋರಣೆಗಳನ್ನು ರೂಪಿಸುತ್ತದೆ, ಮಾರ್ಗವನ್ನು ನಿರ್ಧರಿಸುತ್ತದೆ. ಅದು ತನ್ನ ನಿರ್ಣಯಗಳ ಬಗ್ಗೆ ಜನತೆಗೆ ಹೊಣೆಯುಳ್ಳದ್ದಾಗಿದೆ.

ಭಾರತದ ವಿಶಿಷ್ಟ ಪರಿಸ್ಥಿತಿಗಳಿಗೆ ಅನುಸಾರವಾಗಿ ಭಾರತ ಕಮ್ಯೂನಿಸ್ಟ್ ಪಾರ್ಟಿ ತನ್ನ ಧೋರಣೆಗಳನ್ನು ನಿರ್ಣಯಿಸುವಾಗ, ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲದ ಅಂತರ್‌ರಾಷ್ಟ್ರೀಯ ಕಾರ್ಮಿಕ ಚಳುವಳಿಯ ಅನುಭವಗಳನ್ನು ಉಪಯೋಗಿಸಿಕೊಳ್ಳುತ್ತದೆ; ಸೋವಿಯತ್ ಯೂನಿಯನ್, ಚೀನ ಮತ್ತಿತರ ಜನತಾ ಪ್ರಜಾಪ್ರಭುತ್ವಗಳ ಹಾಗೂ ಎಲ್ಲ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಅನುಭವಗಳನ್ನು ಉಪಯೋಗಿಸಿಕೊಳ್ಳುತ್ತದೆ.

ಕಮ್ಯೂನಿಸ್ಟ್ ಪಾರ್ಟಿಯು ಆಕ್ರಮಣಶೀಲ ರಾಷ್ಟ್ರೀಯ ಅತಿರೇಕತೆ ಹಾಗೂ ಬಂಡವಾಳಶಾಹಿ ರಾಷ್ಟ್ರೀಯತೆಗಳನ್ನು ವಿರೋಧಿಸುತ್ತದೆ. ಅದು ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯತೆಯನ್ನು ಅವಲಂಬಿಸುತ್ತದೆ. ಯುದ್ಧಕ್ಕೆ ವಿರೋಧವಾಗಿ ಮತ್ತು ಶಾಂತಿಯ ಸಲುವಾಗಿ; ಸಾಮ್ರಾಜ್ಯಶಾಹಿಯ ದಾಸ್ಯದಿಂದ ಪರತಂತ್ರ ಜನತೆಗಳ ವಿಮೋಚನೆಯ ಒಗ್ಗೆ; ಜಗತ್ತಿನ ಅದ್ಯಂತವಾಗಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದವನ್ನು ಸ್ಥಾಪಿಸುವುದಕ್ಕೆ ನಡೆಯುವ ಸರ್ವಸಾಮಾನ್ಯ ಹೋರಾಟಗಳಲ್ಲಿ ಜಗತ್ತಿನ ಕಾರ್ಮಿಕರ ಮತ್ತು ಜನಾಂಗಗಳ ಸಹೋದರತೆಯನ್ನೂ ಸಹಕಾರವನ್ನೂ ಸಂಘಟಿತ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯನ್ನೂ ಭಾರತ ಕಮ್ಯೂನಿಸ್ಟ್ ಪಾರ್ಟಿ ಬೆಳೆಸುತ್ತದೆ. ಸರ್ವಸಾಮಾನ್ಯವಾದ ಉದ್ದೇಶಗಳನ್ನು ಸಾಧಿಸುವುದರಲ್ಲಿ ಸಮಾಜವಾದೀ ರಾಷ್ಟ್ರಗಳ ಮತ್ತು ಸಮಾಜವಾದಿಯಲ್ಲದ ರಾಷ್ಟ್ರಗಳ ಕಾರ್ಮಿಕರ ಹಾಗೂ ಜನರ ನಡುವೆ ಸಹಕಾರ ಮತ್ತು ಪರಸ್ಪರ ತಿಳುವಳಿಕೆ ಅಗತ್ಯವೆಂದು ಭಾರತ ಕಮ್ಯೂನಿಸ್ಟ್ ಪಾರ್ಟಿ ನಂಬುತ್ತದೆ.

## ಶಾಂತ ವಿಧಾನಗಳಿಂದ ಸಮಾಜಸತ್ತೆ

ಸಂಪೂರ್ಣ ಪ್ರಜಾಪ್ರಭುತ್ವ ಹಾಗೂ ಸಮಾಜಸತ್ತೆಯನ್ನು ಶಾಂತ ವಿಧಾನಗಳಿಂದ ಸಾಧಿಸಲು ಭಾರತ ಕಮ್ಯೂನಿಸ್ಟ್ ಪಾರ್ಟಿ ಪ್ರಯತ್ನಿಸುತ್ತದೆ. ಬಲವಾದ ಸಾಮುದಾಯಿಕ ಚಳುವಳಿಯನ್ನು ಬೆಳೆಸುವುದರ ಮೂಲಕ, ಪಾರ್ಲಿಮೆಂಟಿನಲ್ಲಿ ಬಹುಮತವನ್ನು ಪಡೆಯುವುದರ ಜೊತೆಯಲ್ಲಿ ಸಾಮುದಾಯಿಕ ಬೆಂಬಲವನ್ನು ಸೃಷ್ಟಿಸುವುದರ ಮೂಲಕ, ಪ್ರತಿಗಾಮಿ ಶಕ್ತಿಗಳ ಪ್ರತಿಭಟನೆಯನ್ನು ಮುರಿಯಲು ಸಾಧ್ಯವಿದೆ; ಆರ್ಥಿಕ, ಸಾಮಾಜಿಕ ಮತ್ತು ರಾಜ್ಯಾಂಗದಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಲು ಪಾರ್ಲಿಮೆಂಟನ್ನು ಜನತೆಯ ನಿರ್ಧಾರದ ಉಪಕರಣವಾಗಿ ಮಾಡಲು ಸಾಧ್ಯವಿದೆ ಎಂದು ಭಾರತ ಕಮ್ಯೂನಿಸ್ಟ್ ಪಾರ್ಟಿ ಅಭಿಪ್ರಾಯಪಡುತ್ತದೆ

ದೇಶದಲ್ಲಿ ಸಮಾಜಸತ್ತೆಗೋಸ್ಕರ ದುಡಿಯುವ ಎಲ್ಲ ಶಕ್ತಿಗಳ ಸಹಕಾರದಿಂದ ಎಲ್ಲ ಕ್ಷೇತ್ರಗಳಲ್ಲೂ ತೀವ್ರ ಪ್ರಗತಿಯನ್ನು ಸಾಧಿಸುವ ಹಾಗೂ ವೈಯಕ್ತಿಕ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ರಾಜಕೀಯ ಸಂಘಟನೆಯ ಸಮೇತವಾದ ಸಂಘಟನಾ ಸ್ವಾತಂತ್ರ್ಯಗಳನ್ನು ದೃಢಪಡಿಸುವ ಸಮಾಜಸತ್ತೆಯನ್ನು ಸ್ಥಾಪಿಸಲು ಭಾರತ ಕಮ್ಯೂನಿಸ್ಟ್ ಪಾರ್ಟಿ ಪ್ರಯತ್ನಿಸುವುದು. ಮನುಷ್ಯನಿಂದ ಮನುಷ್ಯನ ಶೋಷಣೆ ಆಗುವುದನ್ನು ಕೊನೆಗಾಣಿಸುವುದರ ಮೂಲಕ ಮಾನವ ವ್ಯಕ್ತಿತ್ವವು ಪರಿಪೂರ್ಣ ವಿಕಾಸ ಹೊಂದುವುದಕ್ಕೆ ಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಲು ಸಮಾಜಸತ್ತೆಗೆ ಮಾತ್ರ ಸಾಧ್ಯವಾಗುವುದು.

## ಪ್ರಜಾಪ್ರಭುತ್ವ ಕೇಂದ್ರೀಕರಣ

ರಾಜಕೀಯ ಹಾಗೂ ಸಾಮುದಾಯಿಕ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನೆರವೇರಿಸಲು ಹಾಗೂ ಜನತೆಯ ಚಳುವಳಿಯ ನೇತೃತ್ವ ವಹಿಸಲು ಕಮ್ಯೂನಿಸ್ಟ್ ಪಾರ್ಟಿಯ ಸಂಘಟನೆಯನ್ನು ಪ್ರಜಾಪ್ರಭುತ್ವ—ಕೇಂದ್ರೀಕರಣದ ತತ್ವದ ಆಧಾರದಲ್ಲಿ ಕಟ್ಟಲಾಗುತ್ತದೆ. ಪ್ರಜಾಪ್ರಭುತ್ವ ಕೇಂದ್ರೀಕರಣವು ಕಮ್ಯೂನಿಸ್ಟ್ ಪಾರ್ಟಿ

(೫ನೇ ಪುಟ ನೋಡಿ)

# ವಿಶಾಲವಾದ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು ಕರೆ

**ಅಜಯ ಘೋಷ್**

(ಕಳೆದ ಸಂಚಿಕೆಯಿಂದ)

## ಅಪೂರ್ಣವಾದ ಕ್ರಾಂತಿ

ಹಿಂದೆ ಭಾರತವು ಸ್ವಾತಂತ್ರ್ಯಕ್ಕೋಸ್ಕರ ಬ್ರಿಟಿಷ್ ಆಳ್ವಿಕೆಯ ವಿರೋಧ ಹೋರಾಟ ನಡೆಸುತ್ತಿತ್ತು. ಆ ಕಾಲದಲ್ಲಿ ಭಾರತದ ಕಮ್ಯೂನಿಸ್ಟರ ಮುಂದೆ ಎರಡು ಮುಖ್ಯ ಕರ್ತವ್ಯಗಳಿದ್ದುವು: (1) ರಾಷ್ಟ್ರದ ವಿಮೋಚನೆಯ ಸಲುವಾಗಿ ವಿಶಾಲವಾದ ಸಾಮ್ರಾಜ್ಯಶಾಹಿ—ವಿರೋಧ ರಂಗವನ್ನು ರಚಿಸುವುದು; (2) ರಂಗದಲ್ಲಿ ಕಾರ್ಮಿಕ ವರ್ಗದ ನೇತೃತ್ವವನ್ನು ಸ್ಥಾಪಿಸುವುದು. ಈ ಎರಡು ಕರ್ತವ್ಯಗಳಿಗೆ ಪರಸ್ಪರ ನಿಕಟ ಸಂಬಂಧವಿದೆ. ಭಾರತ ಕಮ್ಯೂನಿಸ್ಟ್ ಪಾರ್ಟಿಯು ಸಾಮ್ರಾಜ್ಯಶಾಹಿ-ವಿರೋಧ ಚಳುವಳಿಯಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ. ಭಾರತ ಕಮ್ಯೂನಿಸ್ಟ್ ಪಾರ್ಟಿಯು ನಮ್ಮ ದೇಶದಲ್ಲಿ ಸಮಾಜವಾದದ ಬಾವುಟವನ್ನು ಮೊಟ್ಟ ಮೊದಲು ಎತ್ತಿದ ಪಕ್ಷವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟವು ಪ್ರಪಂಚದ ಆದ್ಯಂತವಾಗಿ ಸಾಮ್ರಾಜ್ಯಶಾಹಿಗೆ ವಿರೋಧವಾಗಿ, ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಸಲುವಾಗಿ, ಶ್ರಮಜೀವಿಗಳು ನಡೆಸುತ್ತಿರುವ ಹೋರಾಟದ ಅಖಂಡ ಭಾಗವೆಂದು ಕಮ್ಯೂನಿಸ್ಟ್ ಪಾರ್ಟಿ ತೋರಿಸಿಕೊಟ್ಟಿತು. ರಾಷ್ಟ್ರೀಯ ಸ್ವಾತಂತ್ರ್ಯದಲ್ಲಿ ಪ್ರಜಾಪ್ರಭುತ್ವ ತುಂಬಿಕೊಂಡಿರಬೇಕು; ಸ್ವಾತಂತ್ರ್ಯವೆಂದರೆ ಬ್ರಿಟಿಷ್ ಸೈನ್ಯವನ್ನು ಹೊರಗೆ ಕಳುಹಿಸುವುದು, ರಾಷ್ಟ್ರೀಯ ಆರ್ಥಿಕದಲ್ಲಿ ಬ್ರಿಟಿಷ್ ಭಂಡವಾಳದ ಆಧಿಪತ್ಯವನ್ನು ಕಿತ್ತುಹಾಕುವುದು, ರಾಜ-ಮಹಾರಾಜರುಗಳ ಆಳ್ವಿಕೆಯನ್ನು ಕೊನೆಗಾಣಿಸುವುದು, ಜಮೀನನ್ನು ರೈತರಿಗೆ ಕೊಡುವುದು, ಕಾರ್ಮಿಕರಿಗೆ ಜೀವನಕ್ಕೆ ತಕ್ಕ ವೇತನ ನೀಡುವುದು, ಪ್ರತಿಯೊಂದು ಕ್ಷೇತ್ರದಲ್ಲೂ ಅತ್ಯಂತ ಪರಿಣಾಮಕಾರಿಯಾದ ಪ್ರಜಾಪ್ರಭುತ್ವವಾದೀ ಸುಧಾರಣೆಗಳನ್ನು ನೆರವೇರಿಸುವುದು—ಇವೇ ಮೊದಲಾದ ವಿಷಯಗಳನ್ನು ಒಳಗೊಂಡಿರಬೇಕು ಎಂದು ಭಾರತ ಕಮ್ಯೂನಿಸ್ಟ್ ಪಾರ್ಟಿ ತೋರಿಸಿಕೊಟ್ಟಿತು. ಸಮರಶೀಲ ಕಾರ್ಮಿಕ—ರೈತ ಚಳುವಳಿಗಳ ಹಾಗೂ ಸಂಘನೆಗಳ ತಳಹದಿಯನ್ನು ಕಟ್ಟಿದ್ದು ಭಾರತ ಕಮ್ಯೂನಿಸ್ಟ್ ಪಾರ್ಟಿ. ಅದು ಕೊಟ್ಟ ಘೋಷಣೆಗಳು, ಅದು ಪ್ರಚಾರ ಮಾಡಿದ ಕಾರ್ಯಕ್ರಮ, ರಾಷ್ಟ್ರೀಯ ಚಳುವಳಿಯ ಮುಂದಳದಲ್ಲಿದ್ದವರ ಮೇಲೆ ಪ್ರಚಂಡ ಪ್ರಭಾವವನ್ನು ಬೀರಿವೆ. ಸತ್ಯವನ್ನು ಒಪ್ಪದವರು ಮಾತ್ರ ಇದನ್ನೆಲ್ಲ ಅಲ್ಲಗಳೆಯಬಹುದು.

ಆದರೆ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ-ವಿರೋಧ ಐಕ್ಯರಂಗವನ್ನು ಕಟ್ಟುವ ಮೂಲಭೂತ ಕರ್ತವ್ಯವನ್ನು ಪೂರ್ತಿಗೊಳಿಸಲು ಸಾಧ್ಯವಾಗಲಿಲ್ಲ ಎಂದು ನಾವು ಒಪ್ಪಬೇಕು. ರಾಷ್ಟ್ರೀಯ ಚಳುವಳಿಯು ವಿಶಾಲವಾಗಿಯೂ ಬಿರುಸಾಗಿಯೂ ಬೆಳೆಯಿತು. ಆದರೆ ಅದರ ಪರಿಣಾಮಕಾರಿ ನೇತೃತ್ವವು ರಾಷ್ಟ್ರೀಯ ಬಂಡವಳಶಾಹಿಯ ಕೈಯಲ್ಲೇ ಉಳಿಯಿತು. ಆದುದರಿಂದ, 1947ರಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕಾಗಿ ಬಂದಾಗ, ಅಧಿಕಾರವು ಕಾಂಗ್ರೆಸ್ಸಿನ ಕೈಗೆ ಹೋದುದು ಸ್ವಾಭಾವಿಕವಾಗಿದೆ, ಅನಿವಾರ್ಯವಾಗಿದೆ. 1947ರ ಅಧಿಕಾರ ಹಸ್ತಾಂತರವು ದೊಡ್ಡ ಪ್ರಗತಿ. ಅದು ಸಾಮ್ರಾಜ್ಯಶಾಹಿಗೆ ದೊಡ್ಡ ಸೋಲು, ಜನತೆಗೆ ದೊಡ್ಡ ಜಯ. ಆಗ ಕಾಂಗ್ರೆಸ್ಸು ಜನರ ಸಾಮ್ರಾಜ್ಯಶಾಹಿ-ವಿರೋಧತನವನ್ನೂ ಆಶೋ-ಆಕಾಂಕ್ಷೆಗಳನ್ನೂ ಒಳಗೊಂಡಿತ್ತು.

ಈ ಜಯವು ಭಾರತದ ಮಟ್ಟಿಗೂ ಇಡೀ ಪ್ರಪಂಚದ ಮಟ್ಟಿಗೂ ಬಹಳ ಪರಿಣಾಮಕಾರಿಯಾಗಿದ್ದರೂ ಕೂಡ, ಸಂಪೂರ್ಣವಾಗಿರಲಿಲ್ಲ. ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿಯು ಇನ್ನೂ ಪೂರ್ತಿಯಾಗಿರಲಿಲ್ಲ.

ಭಾರತದ ಕಾರ್ಮಿಕ ವರ್ಗದ ಸಂಘಟನೆಯೂ ಜಾಗೃತಿಯೂ ಸಾಕಷ್ಟು ಬೆಳೆಯದೆ ಇದ್ದುದೇ ಹೀಗೆ ಆಗಲು ಮುಖ್ಯ ಕಾರಣವಾಗಿದೆ. ಇದು ಕಮ್ಯೂನಿಸ್ಟ್ ಪಾರ್ಟಿಯ ಬಲಹೀನತೆಯಲ್ಲಿ, ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿ ಇಲ್ಲದಿರುವುದರಲ್ಲಿ ಕಂಡುಬರುತ್ತದೆ.

## ಪಾರ್ಟಿಯ ಬೆಳವಣಿಗೆ

ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ರಾಜಕೀಯ ಕ್ಷೇತ್ರದಲ್ಲಿ ಪ್ರಾಮುಖ್ಯವಾದ ಬದಲಾವಣೆಗಳು ಆಗಿವೆ. ಈ ಬದಲಾವಣೆಗಳನ್ನು ಪಾಲಘಾಟ್ ಪಾರ್ಟಿ ಅಧಿವೇಶನದ ನಿರ್ಣಯದಲ್ಲಿ, ಚುನಾವಣಾ ಘೋಷಣೆಯಲ್ಲಿ, ಹಾಗು ಇತರ ಲೇಖನಗಳಲ್ಲಿ ವಿವರಿಸಿದ್ದೇವೆ. ಅದನ್ನೆಲ್ಲ ಇಲ್ಲಿ ತಿರುಗಿ ವಿವರಿಸುವ ಅಗತ್ಯವಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ದೇಶದಲ್ಲಿ ಆಗಿ ಹೋಗಿರುವ ಬೆಳವಣಿಗೆಗಳ ಆಧಾರದಲ್ಲಿ, ದೇಶದ ಅವಶ್ಯಕತೆಗಳ ತಳಹದಿಯಲ್ಲಿ, ದೇಶದೊಳಗಿನ ವಿವಿಧ ಶಕ್ತಿಗಳ ಪರಸ್ಪರ ಸಂಬಂಧಗಳ ಬುನಾದಿಯಲ್ಲಿ ನಮ್ಮ ಪಾರ್ಟಿಯು ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಅನುಸರಿಸತಕ್ಕ ಕಾರ್ಯ ವಿಧಾನ ಹಾಗು ತಂತ್ರಗಳನ್ನು ನಿರ್ಧರಿಸಿತು. ಪಾರ್ಟಿಯು ಅಂಗೀಕರಿಸಿದ್ದ ಆ ಮಾರ್ಗವು ಸರಿಯಾದುದೆಂದು ಸ್ಪಷ್ಟವಾಗಿದೆ.

ಈವತ್ತು ಬಹಳ ಜಟಿಲವಾದ ಮತ್ತು ತೀವ್ರವಾಗಿ ಬೆಳೆಯುತ್ತಿರುವ ಒಂದು ಪರಿಸ್ಥಿತಿಯನ್ನು ನಾವು ಇದಿರಿಸುತ್ತಿದ್ದೇವೆ. ಇಂದಿನ ಪರಿಸ್ಥಿತಿಯಲ್ಲಿ ಅನೇಕ ಮುಖ್ಯ ಅಂಶಗಳಿವೆ. ಆದರೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸತಕ್ಕ ಎಲ್ಲದಕ್ಕಿಂತ ಮುಖ್ಯವಾದ ಅಂಶ — ಕಮ್ಯೂನಿಸ್ಟ್ ಪಾರ್ಟಿಯು ನಮ್ಮ ದೇಶದ ರಾಜಕೀಯ ಜೀವನದಲ್ಲಿ ಒಂದು ದೊಡ್ಡ ಶಕ್ತಿಯಾಗಿರುವುದು. ಕಠಿಣವಾದ ಅಡೆತಡೆಗಳಿದ್ದರೂ, ಎಷ್ಟೋ ತಪ್ಪುಗಳನ್ನು ಮಾಡಿದ್ದರೂ, ನಾವು ನಿರಂತರವಾಗಿ ಬೆಳೆದಿದ್ದೇವೆ. ಚುನಾವಣೆಯ ಫಲಿತಾಂಶದಲ್ಲಿ ಈ ಬೆಳವಣಿಗೆ ಕಂಡು ಬರುತ್ತದೆ. ಒಟ್ಟು ಮತದಾನದ ಶೇಕಡ 11ರಷ್ಟು ಮತಗಳನ್ನು ನಾವು ಪಡೆದಿದ್ದೇವೆ ಕಾರ್ಮಿಕ ವರ್ಗದಲ್ಲಿ ನಾವು ಅತ್ಯಂತ ಪ್ರಬಲ ಶಕ್ತಿಯಾಗಿದ್ದೇವೆ. ಕೇರಳದಲ್ಲಿ ನಾವು ಕಾಂಗ್ರೆಸ್ಸನ್ನು ಅಧಿಕಾರದಿಂದ ಹೊರಗೆ ಹಾಕಿದ್ದೇವೆ. ಕೇರಳ ಸರಕಾರವು ಕೈಗೊಂಡಿರುವ ಕಾರ್ಯಕ್ರಮಗಳು, ನೆರವೇರಿಸಿರುವ ಕೆಲಸಗಳು, ಇಡೀ ದೇಶದ ಜನರ ಮೇಲೆ ಪ್ರಚಂಡ ಪ್ರಭಾವವನ್ನು ಬೀರಿದೆ. ಪಾರ್ಲಿಮೆಂಟಿನಲ್ಲಿ, ಬಂಗಾಳ ಮತ್ತು ಆಂಧ್ರ ಎಸೆಂಬ್ಲಿಗಳಲ್ಲಿ ನಾವು ಮುಖ್ಯ ಪ್ರತಿ ಪಕ್ಷವಾಗಿದ್ದೇವೆ.

ಪಾರಂಪರ್ಯವಾಗಿ ನಾವು ಬಲಹೀನರಾಗಿರುವ ಮತ್ತು ಈಗಲೂ ನಮ್ಮ ಶಕ್ತಿಯು ಕೆಲವೇ ಪ್ರದೇಶಗಳಿಗೆ ಸೀಮಿತವಾಗಿರುವ ಪ್ರಾಂತಗಳಲ್ಲಿ ಕೂಡ, ನಮ್ಮ ಗೌರವವೂ ಪ್ರಭಾವವೂ ಬೆಳೆದಿದೆ. ಉತ್ತ ಪ್ರದೇಶದಲ್ಲಿ ಈಚೆಗೆ ನಡೆದ ಮುನ್ಸಿಪಲ್ ಚುನಾವಣೆಗಳಲ್ಲಿ ಪಾರ್ಟಿಗೆ ದೊರೆತ ಜಯದ ಕುರಿತು ಬರೆಯುತ್ತ, ಬನಾರಸ್ ಎಂಬ ಕಾಂಗ್ರೆಸ್ ಪತ್ರಿಕೆಯೊಂದು, ಕಮ್ಯೂನಿಸ್ಟ್ ಪಾರ್ಟಿಯು "ಕಾಂಗ್ರೆಸ್ಸಿನ ಅಧಿಕಾರವನ್ನು ಸವಾಲು ಮಾಡುವ ಮುಂದಣಿಯಲ್ಲಿರುವ ಪಕ್ಷ" ಎಂದು ವಿವರಿಸಿದೆ.

ನಮ್ಮ ಪಾರ್ಟಿಯನ್ನು ಟೀಕಿಸುವವರಿಗೆ ಇಂದು ಪಾರ್ಟಿಯನ್ನು ಅಪಹಾಸ್ಯ ಮಾಡುವ ಧೈರ್ಯವಿಲ್ಲ; ಪಾರ್ಟಿಯನ್ನು ತುಚ್ಛೀಕಾರದಿಂದ ಕಡೆಗಾಣಿಸುವ ಉದ್ಧಟತನ ಕಳೆದುಹೋಗಿದೆ. ಚರಿತ್ರೆಯಲ್ಲಿ ಹಿಂದೆ ಎಂದಿಗಿಂತಲೂ ಇಂದು ನಮ್ಮ ಗೌರವ ಮೇಲಿನ ಮಟ್ಟದಲ್ಲಿದೆ. ನಮ್ಮ ಪ್ರಭಾವವು ಯಾವ ಕಾಲದಲ್ಲಿ ಇದ್ದುದಕ್ಕಿಂತಲೂ ಇಂದು ಹೆಚ್ಚು ವಿಶಾಲವಾಗಿದೆ.

ಕಮ್ಯೂನಿಸ್ಟ್ ಪಾರ್ಟಿಯ ಚರಿತ್ರೆಯು ಕೇವಲ ತಪ್ಪುಗಳ ಚರಿತ್ರೆಯಲ್ಲದೆ ಮತ್ತೇನೂ ಅಲ್ಲವೆಂದು ಪಾರ್ಟಿಯ ಶತ್ರುಗಳು ಹೇಳುವ ಹಾಗೂ ಪಾರ್ಟಿಯ ಕೆಲವು "ಮಿತ್ರರ" ಒಪ್ಪಿಗೆ ಕೂಡ ಪಡೆಯುವ ಮಾತು ಸುಳ್ಳೆಂದು ಇದರಿಂದ ಖಂಡಿತವಾಗುತ್ತದೆ.

ಈ ಬೆಳವಣಿಗೆಗಳು ಏನನ್ನು ತೋರಿಸುತ್ತವೆ? ಜನಸಮುದಾಯವು ಎಡಪಕ್ಷಕ್ಕೆ ಒಲಿದಿದೆ; ಪ್ರತಿಪಾದಿಸುತ್ತಿರುವ ಧೋರಣೆಗಳು ಸರಿ ಎಂದು ಜನತೆ ಹೆಚ್ಚು ಹೆಚ್ಚು ಅಂಗೀಕರಿಸುತ್ತಿದೆ; ಜನರ ಹಿತಗಳ ರಕ್ಷಣೆಯ ಹೋರಾಟದಲ್ಲಿ ಪಾರ್ಟಿಯು ವಹಿಸುತ್ತಿರುವ ಪಾತ್ರವನ್ನು ಜನತೆ ಹೆಚ್ಚುಹೆಚ್ಚು ಅರಿತುಕೊಳ್ಳುತ್ತಿದೆ. ಪ್ರಜಾಪ್ರಭುತ್ವದ ಮತ್ತು ಸಮಾಜವಾದದ ವಿಚಾರಗಳ ಪ್ರಭಾವ ಬೆಳೆಯುತ್ತಿದೆ.

ಎಲ್ಲದಕ್ಕಿಂತ ಮುಖ್ಯವಾಗಿ, ನಮ್ಮ ರಾಷ್ಟ್ರೀಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ನೇತೃತ್ವವನ್ನು ಸ್ಥಾಪಿಸಲು ತಕ್ಕ ಪರಿಸ್ಥಿತಿಯು ಸೃಷ್ಟಿಯಾಗುತ್ತಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಅನೇಕ ಕಾರಣಗಳಿಂದಾಗಿ, ಅದನ್ನು ಬ್ರಿಟಿಷ್ ಆಳ್ವಿಕೆಯ ವಿರೋಧ ಹೋರಾಡುವಾಗ ಸ್ಥಾಪಿಸಲು ಸಾಧ್ಯವಾಗಲಿಲ್ಲ. ಆದರೆ ಅದನ್ನು ಈಗ ಸ್ಥಾಪಿಸಲು ಸಾಧ್ಯವಿದೆ. ಅಪೂರ್ಣವಾಗಿರುವ ನಮ್ಮ ಕ್ರಾಂತಿಯ ಕರ್ತವ್ಯಗಳನ್ನು ಪೂರ್ತಿಗೊಳಿಸಲು ಅದು ಅಗತ್ಯವಿದೆ. ಈ ಉದ್ದೇಶವನ್ನು ಈಡೇರಿಸುವುದಕ್ಕೆ—ಕಾರ್ಮಿಕ ವರ್ಗದ ನೇತೃತ್ವವನ್ನು ಸ್ಥಾಪಿಸುವುದಕ್ಕೆ—ಮುಖ್ಯವಾದ ಉಪಕರಣ ಸಾಮುದಾಯಿಕ ಕಮ್ಯೂನಿಸ್ಟ್ ಪಾರ್ಟಿ.

ಅದಕ್ಕೆ ಹಿಂದೆ ಎಂದೂ ಇಂದಿನಷ್ಟು ಅನುಕೂಲ ಪರಿಸ್ಥಿತಿ ಇದ್ದಿಲ್ಲ. ಅದಕ್ಕೆ ಕೇವಲ ನಮ್ಮ ದೇಶದೊಳಗಿನ ಪರಿಸ್ಥಿತಿ ಮಾತ್ರವಲ್ಲ, ಇಡೀ ಪ್ರಪಂಚದ ಪರಿಸ್ಥಿತಿಯಲ್ಲಿ ಉಂಟಾಗಿರುವ ಮೂಲಭೂತವಾದ ಬದಲಾವಣೆಗಳು ಕೂಡ ಅದಕ್ಕೆ ಕಾರಣವಾಗಿವೆ.

ಸಮಾಜಶಕ್ತಿಯು ಜಾಗತಿಕ ಪದ್ಧತಿಯಾಗಿ ಬೆಳೆದಿದೆ. ವಸಾಹತು ಪದ್ಧತಿಯು

(೬ನೇ ಪುಟ ನೋಡಿ)

(೪ನೇ ಪುಟದಿಂದ)

ಯನ್ನು ಐಕ್ಯತೆ, ಶಿಸ್ತು ಹಾಗೂ ಸಮರಶೀಲತೆಯುಳ್ಳ ಸಂಘಟನೆಯಾಗಿ, ಯಾವ ಪರಿಸ್ಥಿತಿಯಲ್ಲೂ ಸದಸ್ಯವರ್ಗವನ್ನು ಕಾರ್ಯರಂಗಕ್ಕೆ ಇಳಿಸಬಲ್ಲ ಸಂಘಟನೆಯಾಗಿ, ಕಟ್ಟುತ್ತದೆ.

ಸರಿಯಾದ ಪ್ರಜಾಪ್ರಭುತ್ವ ಕ್ರಮಗಳನ್ನೂ ವರ್ತನೆಗಳನ್ನೂ ಅನುಸರಿಸುವುದು, ಪ್ರಚಲಿತ ಹಾಗೂ ಪ್ರಾಮುಖ್ಯ ಪ್ರಶ್ನೆಗಳ ಕುರಿತು ಪಾರ್ಟಿಯೊಳಗೆ ಚರ್ಚೆಯನ್ನು ಆರಂಭಿಸುವುದು ಮತ್ತು ಪ್ರೋತ್ಸಾಹಿಸುವುದು, ಪಾರ್ಟಿ ಸದಸ್ಯರು ಸ್ವತಂತ್ರವಾಗಿ ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಅರಿತುಕೊಳ್ಳುವುದು, ಪಾರ್ಟಿಯ ನಾಯಕಾಂಗಗಳ ಪ್ರಾಮುಖ್ಯ ಜವಾಬ್ದಾರಿಯಾಗಿದೆ.

ಪಾರ್ಟಿಯೊಳಗೆ ಸರಿಯಾದ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಅನುಸರಿಸುವುದರಿಂದ ಕೇಂದ್ರೀಕರಣವು ಬಲಹೊಂದುತ್ತದೆ. ಜನತೆಯ ಚಳುವಳಿಯನ್ನು ಐಕ್ಯವಾಗಿಯೂ ತೀವ್ರವಾಗಿಯೂ ನಡೆಸುವುದಕ್ಕೆ ಕೇಂದ್ರೀಕರಣ ಅಗತ್ಯವಿದೆ.

## ಸದಸ್ಯರ ಕರ್ತವ್ಯ

ಕಮ್ಯೂನಿಸ್ಟ್ ಪಾರ್ಟಿಯ ಶಕ್ತಿಯು ಅದರ ತಾತ್ವಿಕ ಪರಿಶುದ್ಧತೆಯನ್ನೂ ಸಂಘಟನೆಯ ಸಮರೂಪತೆಯನ್ನೂ ಹೊಂದಿಕೊಂಡಿದೆ; ಕಾರ್ಮಿಕ ವರ್ಗ, ರೈತಾಂಗ ಮತ್ತಿತರ ಶ್ರಮಜೀವಿ ಜನವಿಭಾಗಗಳೊಡನೆ ಪಾರ್ಟಿಗೆ ಇರುವ ಬಲವಾದ ಸಂಪರ್ಕಗಳನ್ನು ಅವಲಂಬಿಸಿಕೊಂಡಿದೆ; ನಿರ್ಧಾರದ ಹಾಗೂ ಕಾರ್ಯಾಚರಣೆಯ ಐಕ್ಯತೆಯನ್ನು ಆಧರಿಸಿಕೊಂಡಿದೆ. ಎಲ್ಲ ಕಾಲಗಳಲ್ಲೂ ಎಲ್ಲ ಸಂದರ್ಭಗಳಲ್ಲೂ ಈ ಐಕ್ಯತೆಯನ್ನು ಬಲಪಡಿಸುವುದು ಕಮ್ಯೂನಿಸ್ಟ್ ಪಾರ್ಟಿಯ ಪ್ರತಿಯೊಬ್ಬ ಸದಸ್ಯನ ಕರ್ತವ್ಯವಾಗಿದೆ.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಪ್ರತಿಯೊಬ್ಬ ಸದಸ್ಯನೂ ಪಾರ್ಟಿಯ ಹಿತಗಳನ್ನು ತನ್ನ ಸ್ವಂತ ಹಿತಗಳಿಗಿಂತ ಮೇಲೆ ಇರಿಸತಕ್ಕದ್ದು, ಕಟ್ಟುನಿಟ್ಟಿನ ಶಿಸ್ತನ್ನು ಅನುಸರಿಸತಕ್ಕದ್ದು, ನಮ್ಮ ನಾಡಿನ ಮಹಾಜನತೆಯನ್ನು ವಿಧೇಯತೆಯಿಂದ ಸೇವಿಸತಕ್ಕದ್ದು. ನಮ್ಮ ಸ್ವಾತಂತ್ರ್ಯವನ್ನು ಭದ್ರಪಡಿಸುವುದಕ್ಕೆ, ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ಹಾಗೂ ಸುಖಸಮೃದ್ಧವಾದ ಸಮಾಜವಾದೀ ಭಾರತದ ಬುನಾದಿಯನ್ನು ನಿರ್ಮಿಸುವುದಕ್ಕೆ ಸರ್ವಸಾಮಾನ್ಯವಾದ ಪರಿಶ್ರಮದಲ್ಲಿ ನಮ್ಮ ಜನತೆಯನ್ನು ಐಕ್ಯಗೊಳಿಸುವುದಕ್ಕೆ ಎಲ್ಲ ಪಾರ್ಟಿ ಸದಸ್ಯರೂ ಅವಿಶ್ರಾಂತವಾಗಿ ದುಡಿಯತಕ್ಕದ್ದು ಎಂದು ಭಾರತ ಕಮ್ಯೂನಿಸ್ಟ್ ಪಾರ್ಟಿ ನಿರ್ದೇಶಿಸುತ್ತದೆ.

# ವಿಶಾಲವಾದ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು ಕರೆ

(ಅನೇ ಪುಟದಿಂದ)

ಮುರಿಯುತ್ತಿದೆ ಶಾಂತಿಯನ್ನೂ, ಸಾಮ್ರಾಜ್ಯಶಾಹಿಗಳ ಆಕ್ರಮಣಗಳಿಗೆ ಗುರಿಯಾದವರ ಸ್ವಾತಂತ್ರ್ಯವನ್ನೂ ರಕ್ಷಿಸಲು ಸೋವಿಯತ್ ಯೂನಿಯನಿನ ಮುಂದಾಳ್ತನದಲ್ಲಿ ಸಮಾಜವಾದಿ ರಾಷ್ಟ್ರಗಳು ನೆರವಾಗುತ್ತಿವೆ. ಮಾನವ ನಿರ್ಮಿತ ಉಪಗ್ರಹಗಳನ್ನು ಹಾರಿಸಿದುದರಲ್ಲಿ ಸಮಾಜವಾದಿ ಪದ್ಧತಿಯ ಶ್ರೇಷ್ಠತೆಯು ಸ್ಪಷ್ಟವಾಗಿದೆ. ಇದೆಲ್ಲ ಮಾನವ ಕೋಟಿಯ ಮೇಲೆ ಪ್ರಚಂಡವಾದ ಪ್ರಭಾವವನ್ನು ಬೀರುತ್ತಿವೆ. ಸಮಾಜವಾದೀ ಜಗತ್ತಿನ ಮತ್ತು ಕಮ್ಯೂನಿಸಮಿನ ಗೌರವವು ಹೊಸ ಅಂತಸ್ತನ್ನು ತಲುಪಿದೆ. ಹನ್ನೆರಡು ಕಮ್ಯೂನಿಸ್ಟ್ ಪಾರ್ಟಿಗಳ ಜಂಟಿ ಹೇಳಿಕೆಯು ಪಾರ್ಟಿಯನ್ನು ಐಕ್ಯಗೊಳಿಸಲು, ಹಠವಾದ ಮತ್ತು ಪುನರ್ ಪರಿಶೀಲನವಾದಗಳನ್ನು ತಡೆಯಲು, ಬಲವಾದ ತಳಹದಿಯನ್ನು ಸೃಷ್ಟಿಸಿದೆ.

ಆದುದರಿಂದ, ಸಾಮುದಾಯಿಕ ಕಮ್ಯೂನಿಸ್ಟ್ ಪಾರ್ಟಿಯು ಇಂದು ಚಾರಿತ್ರಿಕ ಅವಶ್ಯಕತೆಯಾಗಿದೆ, ಮಾತ್ರವಲ್ಲ; ಹೊರಗಿನ ಹಾಗೂ ಒಳಗಿನ ಪರಿಸ್ಥಿತಿಗಳು ಈ ಮುಖ್ಯ ಅವಶ್ಯಕತೆಯನ್ನು ಪೂರೈಸುವುದಕ್ಕೆ ಸಂಪೂರ್ಣ ಅನುಕೂಲವಾಗಿದೆ. ಈ ಕರ್ತವ್ಯವನ್ನು ನೆರವೇರಿಸದಿದ್ದರೆ ಇನ್ನು ಮುಂದುವರಿಯಲು ಕಷ್ಟವಾಗುವುದು; ಮಾತ್ರವಲ್ಲ, ಈವರೆಗೆ ಸಾಧಿಸುವ ಜಯಗಳನ್ನು ಸ್ಥಿರಗೊಳಿಸುವುದಕ್ಕೂ ಕಳೆದು ಹೋಗದಂತೆ ಕಾಯುವುದಕ್ಕೂ ಕೂಡ ಕಷ್ಟವಾಗುವುದು.

## ಸಾಮುದಾಯಿಕ ಪಾರ್ಟಿಯ ರಚನೆ

ಇಂಥ ಸಾಮುದಾಯಿಕ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವುದು ಹೇಗೆ? ಯಾವ ಘೋಷಣೆಗಳಿಂದ, ಎಂಥ ಚಳುವಳಿಗಳಿಂದ, ಯಾವ ರೂಪದ ಹೋರಾಟಗಳಿಂದ ಮತ್ತು ಸಾಮುದಾಯಿಕ ಚಟುವಟಿಕೆಗಳ ಮೂಲಕ ಕಾರ್ಮಿಕ ವರ್ಗದ ನೇತೃತ್ವವನ್ನು ಸ್ಥಾಪಿಸಬಹುದು? ಇನ್ನು ಮುಂದೆ ನಮ್ಮ ಚಟುವಟಿಕೆಗಳ ಸ್ವರೂಪ ಯಾವುದಿರಬೇಕು? ಅದು ಹಿಂದಿನದರಿಂದ ಯಾವ ರೀತಿಯಲ್ಲಿ ಬೇರೆಯಾಗಿರತಕ್ಕದ್ದು? ಈ ಪ್ರಶ್ನೆಗಳನ್ನು ಉತ್ತರಿಸಬೇಕು.

ನಮ್ಮ ಪಾರ್ಟಿಯ ಇಡೀ ಚರಿತ್ರೆಯಲ್ಲಿ ನಾವು ಮಾಡಿರುವ ಕೆಲಸಗಳಿಂದ ಅನುಭವ ಪಡೆದಿದ್ದೇವೆ. ಮುಖ್ಯವಾಗಿ ಕಳೆದ ಹತ್ತು ವರ್ಷಗಳ ಅನುಭವ ನಮಗಿದೆ. ಅದರೊಂದಿಗೆ, ನಮ್ಮ ಸಹೋದರ ಪಕ್ಷಗಳ ಅನುಭವ, ನಮ್ಮ ಸಾಧನೆಗಳಿಂದಲೂ ತಪ್ಪುಗಳಿಂದಲೂ ನಾವು ಕಲಿತಿರುವ ಪಾಠ, ನಮ್ಮ ಮುಂದಿದೆ. ನಮ್ಮ ಮುಂದಿನ ಪ್ರಶ್ನೆಗಳಿಗೆ ಉತ್ತರ ಕೊಡಲು ಈ ಅನುಭವ ಸಾಕಷ್ಟು ತಳಹದಿಯನ್ನು ನೀಡುತ್ತದೆ. ಇದು ನಮ್ಮ ಕೇಂದ್ರ ಸಮಿತಿಯು ನೆರವೇರಿಸತಕ್ಕ ಒಂದು ಮುಖ್ಯ ಕರ್ತವ್ಯವಾಗಿದೆ. ಪಾಲಘಾಟ್ ನಿರ್ಣಯ ಹಾಗೂ ಚುನಾವಣೆಯ ಪರಿಶೀಲನೆ ಇದಕ್ಕೆ ಆಧಾರವಾಗಿವೆ. ಈ ದಸ್ತಾವೇಜುಗಳಲ್ಲಿ ಕೊಡಲಾಗಿರುವ ತಿಳುವಳಿಕೆಯನ್ನು ಮುಂದುವರಿಸಬೇಕು; ಅನಂತರದ ಬೆಳವಣಿಗೆಗಳ ಬೆಳಕಿನಲ್ಲಿ ಇನ್ನಷ್ಟು ಸ್ಪಷ್ಟೀಕರಿಸಬೇಕು, ವಿಶದೀಕರಿಸಬೇಕು.

ಕಳೆದ ಚುನಾವಣೆಗಳ ಅತ್ಯಂತ ಪ್ರಮುಖ್ಯವಾದ ಫಲ–ನಮ್ಮ ದೇಶದ ರಾಜಕೀಯ ಜೀವನದಲ್ಲಿ ಕಾಂಗ್ರೆಸಿನ ಗುತ್ತಿಗೆಯ ಶಕ್ತಿ ಕಡಿಮೆಯಾದುದು; ಜನಸಮುದಾಯ ಎಡಪಕ್ಷಕ್ಕೆ ಒಲಿದುದು; ಪ್ರಜಾಪ್ರಭುತ್ವವಾದಿ ಪ್ರತಿಪಕ್ಷಗಳ ಸರ್ವಸಾಮಾನ್ಯ ಬಲ ಹೆಚ್ಚಾದುದು; ಕಮ್ಯೂನಿಸ್ಟ್ ಪಾರ್ಟಿಯು ಬಲಶಾಲಿಯಾದ ಶಕ್ತಿಯಾಗಿ ಬೆಳಕಿಗೆ ಬಂದುದು. ಚುನಾವಣೆಗಳಲ್ಲಿ ಸ್ಪಷ್ಟವಾದ ಈ ಸರಣಿ ಮುಂದುವರಿಯುತ್ತಿದೆ. ಮುಂಬಯಿ, ಉತ್ತರ ಪ್ರದೇಶ, ಆಂಧ್ರ ಪ್ರದೇಶಗಳ ಸ್ಥಳೀಯ ಚುನಾವಣೆಗಳ ಫಲಿತಾಂಶ ಅದನ್ನು ತೋರಿಸಿಕೊಟ್ಟಿವೆ. ಚುನಾವಣೆಗಳ ನಂತರದ ತಿಂಗಳುಗಳಲ್ಲಿ ನಡೆದ ಅನೇಕ ಹೋರಾಟಗಳು ಅದನ್ನು ತೋರಿಸಿಕೊಟ್ಟಿವೆ. ಚುನಾವಣೆಗಳ ಬೆನ್ನಿಗೆ ನಡೆದ ಪೋಸ್ಟಲ್ ನೌಕರರ ಮತ್ತಿತರ ನೌಕರ ವರ್ಗಗಳ ಚಳುವಳಿಗಳು ಮತ್ತಿತರ ಘಟನೆಗಳು ಅದನ್ನು ತೋರಿಸಿಕೊಟ್ಟಿವೆ. ಅನೇಕ ಸಂದರ್ಭಗಳಲ್ಲಿ ಜನರ ಕೇಳಿಕೆಗಳನ್ನು ಸರಕಾರ ಒಪ್ಪಬೇಕಾಗಿ ಬಂದಿದೆ. ಎರಡನೆಯ ವೇತನ ಸಮಿತಿಯನ್ನು ಸರಕಾರ ನೇಮಿಸಿದುದು ಅದಕ್ಕೊಂದು ಉದಾಹರಣೆಯಾಗಿದೆ. ಕಾಂಗ್ರೆಸ್ಸಿನ ಒಳಗೆ ಕೂಡ ಗಣ್ಯವಾದ ಬೆಳವಣಿಗೆಗಳು ಆಗುತ್ತಿವೆ. ಸರಕಾರದ ಧೋರಣೆಗಳನ್ನು ಮೆಚ್ಚದಿದ್ದರೂ ಮಾತನಾಡಲು ಧೈರ್ಯವಿಲ್ಲದಿದ್ದ ವಿಭಾಗಗಳು ಈಗ ಹೆಚ್ಚು ಬಹಿರಂಗವಾಗಿ ಮಾತನಾಡುತ್ತಿವೆ, ಒತ್ತಾಯ ಮಾಡುತ್ತಿವೆ.

—(ಮುಂದುವರಿಯುವುದು)—

# ಭೀಕರ ಗಣಿ ದುರ್ಘಟನೆ

ಕಳೆದ ತಿಂಗಳಲ್ಲಿ ಒಂದೇ ದಿನ ನಾಲ್ಕು ಭಯಂಕರ ದುರ್ಘಟನೆಗಳು ಘಟಿಸಿದವು. ನಾಲ್ಕರಲ್ಲೂ ಕಾರ್ಮಿಕರ ಸರ್ವನಾಶವಾಯಿತು. ಒಂದು ದುರ್ಘಟನೆ ನಾಗಪುರದ ಸೇಫ್ಟಿಫ್ಯೂಸ್ ಕಾರ್ಖಾನೆಯಲ್ಲಿ ಆಸ್ಫೋಟನೆ ನಡೆದು, ಕೆಲಸ ಮಾಡುತ್ತಿದ್ದ 6 ಮಂದಿ ಮಹಿಳೆಯರು ಅಲ್ಲೇ ಮೃತರಾದರು.

ಇನ್ನೊಂದು, ಘಟನೆ ಧನಬಾದಿನಿಂದ 12 ಮೈಲು ದೂರದಲ್ಲಿರುವ ಭೌರ ಕಲ್ಲಿದ್ದಲು ಗಣಿಯಲ್ಲಾಯಿತು. 23 ಮಂದಿ ಕೆಲಸಗಾರರು 50 ಅಡಿ ಆಳದಲ್ಲಿ ಕೆಲಸ ಮಾಡುತ್ತಿದ್ದಾಗ ಗಣಿಯೊಳಗೆ ನೀರು ನುಗ್ಗಿತು. ನೀರಿನ ಪ್ರವಾಹ ತುಂಬಾ ಜೋರಾಗಿದ್ದುದರಿಂದ ರಕ್ಷಣೆಯ ಕಾರ್ಯಗಳನ್ನು ಕೈ ಬಿಡಲಾಯಿತು. ಒಳಗಿದ್ದ 23 ಮಂದಿಯೂ ಸಾವಿಗೆ ಬಲಿಯಾದರು.

ಮೂರನೆಯದು, ಝರಿಯಾ ಬಳಿ ಇರುವ ಮಹಲಬಾಗಿವ್ ಕಲ್ಲಿದ್ದಲು ಗಣಿಯೊಳಗೆ ದಾಮೋದರ ನದಿಯ ನೀರು ಹರಿದು ಒಳಗೆ ಕೆಲಸ ಮಾಡುತ್ತಿದ್ದ 15 ಮಂದಿ ಸಾವಿಗೀಡಾದರು. ಅದೇ ದಿನ ರಾತ್ರಿ 9-45ಕ್ಕೆ ಕಲ್ಕತ್ತೆಯ ಅಸನ್ ಸಾಲಿಗೆ 10 ಮೈಲಿ ದೂರದಲ್ಲಿ ದಾಮೋದರ ನದಿಯ ಉತ್ತರದ ಕಡೆಯಲ್ಲಿರುವ ಚಿನಕುರಿ ಕಲ್ಲಿದ್ದಲು ಗಣಿಗೆ ಸೇರಿದ 2,500 ಅಡಿ ಆಳದ ಗುಂಡಿಯಲ್ಲಿ ಆಸ್ಫೋಟನೆ ನಡೆದು, ಕೆಲಸ ಮಾಡುತ್ತಿದ್ದ 196 ಮಂದಿಯಲ್ಲಿ 185 ಮಂದಿ ಭೀಕರ ಸಾವಿಗೀಡಾದರು. ಆಸ್ಫೋಟದ ಎದುರಿಗೆ ಕೈಗೊಳ್ಳಲಾದ ಎಲ್ಲಾ ರಕ್ಷಣಾ ವ್ಯವಸ್ಥೆಗಳೂ ವಿಫಲವಾದುವು.

ಈ ದುರ್ಘಟನೆಗೆ ಕಾರಣ, ಗಣಿಯೊಳಗಿನ ಅನಿಲ ಮತ್ತು ಕಲ್ಲಿದ್ದಲಿನ ಧೂಳು ಎನ್ನಲಾಗಿದೆ. ಭಾರತದ ಗಣಿ ದುರ್ಘಟನೆಯ ಇತಿಹಾಸದಲ್ಲೇ ಇದು ಅತ್ಯಂತ ಘೋರ ದುರ್ಘಟನೆಯೆಂದು ಹೇಳಲಾಗಿದೆ. ಈ ದುರ್ಘಟನೆಗೆ ಬಲಿಯಾದ ಕಾರ್ಮಿಕರ ವಿಧವೆಯರಿಗೆ ಎರಡು ವರುಷಗಳ ತನಕ ತಲಾ ತಿಂಗಳಿಗೆ 10/– ರೂ.ಯಂತೆ ಹಾಗೂ ಮೂರು ವರುಷಗಳ ತನಕ ಪ್ರತಿ ಮಗುವಿಗೂ ತಿಂಗಳಿಗೆ 5 ರೂ.ಯಂತೆ ನೀಡಲಾಗುವುದೆಂದು ಕಲ್ಲಿದ್ದಲು ಗಣಿ ಕಮಿಷನ್ನಿನವರು ತಿಳಿಸಿದ್ದಾರೆ. ಈಗ ಗಣಿಯನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ.

ಆದರೆ ಸರಕಾರವು ಇದಿಷ್ಟೇ ಸೌಲಭ್ಯಗಳನ್ನು ನೀಡಿದರೆ ತನ್ನ ಜವಾಬ್ದಾರಿ ನಿರ್ವಹಿಸಿದಂತಾಗುವುದೆ? ಅಥವಾ ನಡೆದ ದುರ್ಘಟನೆಯ ಭಯಾನಕತೆಯನ್ನು ಗಂಭೀರವಾಗಿ ಪರಿಶೀಲಿಸುವುದೆ? ಈ ಪ್ರಶ್ನೆ ಇಂದು ಭಾರತದ ಪ್ರತಿಯೊಬ್ಬರ ಮನದಲ್ಲೂ ಹುಟ್ಟಿದೆ.

1957ರಲ್ಲಿ ಗಣಿ ದುರಂತಗಳು ಅತ್ಯಂತ ಕಮ್ಮಿಯಾಗಿವೆಯೆಂದು ಒಂದು ತಿಂಗಳ ಹಿಂದೆ ಸರಕಾರದ ಒಂದು ಪ್ರಕಟನೆಯು ತಿಳಿಸಿದೆ. 57ರ ಹಿಂದಿನ 5 ವರ್ಷಗಳಲ್ಲಿ ಪ್ರತಿ ವರ್ಷವೂ 316 ದುರ್ಘಟನೆಗಳು ನಡೆದಿವೆ. 57ರಲ್ಲಿ ಇದು ಕೇವಲ 179ಕ್ಕೆ ಇಳಿದಿತ್ತು. ಅದೇ ಅಂದಾಜಿನಲ್ಲಿ 1958ರಲ್ಲಿ ಇನ್ನೂ ಕಮ್ಮಿಯಾಗಬಹುದೆಂದು ಆಶಿಸಲಾಗಿತ್ತು. ಆದರೆ ಚಿನಕುರಿಯ ದುರ್ಘಟನೆಯು ಈ ಎಲ್ಲಾ ಕನಸನ್ನೂ ಮುರಿದು ಹಾಕಿದೆ. ಒಂದೇ ಘಟನೆಯಲ್ಲೇ 1957ಕ್ಕಿಂತಲೂ ಅಧಿಕ ಸಾವು ಸಂಭವಿಸಿತು.

ಈ ಚಿನಕುರಿ ದುರ್ಘಟನೆಯು ಕಳೆದ 23 ವರ್ಷಗಳಲ್ಲಿ ಎಲ್ಲಕ್ಕಿಂತಲೂ ಭಯಾನಕವೆಂದು ಹೇಳಲಾಗಿದೆ. 1954 ರಲ್ಲಿ ಪರ್ಸಿಯಾ ಗಣಿಯಲ್ಲಿ ನಡೆದ ದುರ್ಘಟನೆಯಲ್ಲಿ 63 ಮಂದಿ ಮೃತ ಪಟ್ಟಿದ್ದರು. 1956ರಲ್ಲಿ ಬುರ್ರಾದೆಮಿನಲ್ಲಾದ ದುರ್ಘಟನೆಯಲ್ಲಿ 28 ಮಂದಿ ಹತರಾಗಿದ್ದರು.

ಅಂದಿನ ಈ ಎರಡು ದುರ್ಘಟನೆಗಳ ಬಗ್ಗೆ ನಡೆದ ವಿಚಾರಣೆಗಳಲ್ಲಿ ಮಾಲಿಕರೇ ದುರ್ಘಟನೆಗೆ ಕಾರಣರೆಂದು ವ್ಯಕ್ತಪಟ್ಟಿತ್ತು. ಇಂದಿನ ಈ ಚಿನಕುರಿ ಘಟನೆಯ ಬಗ್ಗೆ ಸರಿಯಾದ ವಿಚಾರಣೆ ನಡೆಸುವುದು ಸೂಕ್ತವಲ್ಲವೆ? ಸರಕಾರ ಈ ನಿಟ್ಟಿನಲ್ಲಿ ಸರಿಯಾದ ಕ್ರಮ ವಹಿಸಬಲ್ಲುದೆ?

## ರೈತರಂಗ

(ಅನೇ ಪುಟದಿಂದ)

ಮೆರವಣಿಗೆಗಳನ್ನು ನಡೆಸಿ, ಯೋಗ್ಯ ಭೂಸುಧಾರಣೆ ಶಾಸನವನ್ನು ಜಾರಿಗೊಳಿಸುವಂತೆ ಸರಕಾರವನ್ನು ಒತ್ತಾಯಿಸುವ ವಿಷಯಗಳನ್ನು ಸಭೆಯಲ್ಲಿ ತಿಳಿಸಿದರು, ನಂತರ ಶ್ರೀ ರೈವ ದ್ ಸೋಜರು ಮಾತಾಡುತ್ತಾ ಎಲ್ಲಾ ರೈತರು ಗೇಣಿ ಸಂದಾಯವಾದುದಕ್ಕೆ ರಶೀದಿ ಪಡಕೊಳ್ಳುವಂತೆಯೂ, ಗೇಣಿ ನಿರ್ಣಯಿಸಲು ಗೇಣಿಕೋರ್ಟಿಗೆ ಅರ್ಜಿ ಹಾಕುವಂತೆಯೂ ರೈತರನ್ನು ಕೇಳಿಕೊಂಡರು. ಜ| ಶೀದಿ ಬ್ಯಾರಿಯವರು ಸ್ಥಳೀಯ ಗ್ರಾಮಗಳಲ್ಲಿ ಭೂಮಾಲಿಕರು ಒಕ್ಕಲುಗಳಿಗೆ ಕೊಡುವ ತೊಂದರೆಗಳನ್ನು ಸಭೆಯಲ್ಲಿ ಹೇಳಿದರಲ್ಲದೆ, ಅವರ ವರ್ತನೆಯನ್ನು ಖಂಡಿಸಿದರು. ಕೊನೆಗೆ "ಯೋಗ್ಯ ಭೂಸುಧಾರಣೆ"ಯನ್ನು ಕೂಡಲೇ ಜಾರಿಗೊಳಿಸುವಂತೆ ಸರಕಾರವನ್ನು ಒತ್ತಾಯಿಸುವ ಠರಾವನ್ನು ಸಭೆಯಲ್ಲಿ ಮಂಜೂರು ಮಾಡಲಾಯಿತು. ಜ| ಬಿ ಎ. ಮಮ್ಮಿಯವರು ಧನ್ಯವಾದವಿತ್ತರು.

ಮಂಗಳೂರು ಪತ್ರ

# ಮೆಹರೂ ಲಂಚ್ ಹೋಮ್ ಮಜೂರರ ಮೇಲಿನ ಖಟ್ಲೆಗಳು ಬಿಟ್ಟುಹೋದುವು

ಮಂಗಳೂರಿನ ಮೆಹರೂ ಲಂಚ್ ಹೋಮ್ ಎಂಬ ಹೋಟೇಲಿನಲ್ಲಿ ದುಡಿಯುತ್ತಿದ್ದ ಶ್ರೀ ಬಿ. ಪದ್ಮನಾಭ ಎಂಬ ಮಜೂರರನ್ನು ಮ್ಹಾಲಕರು ಕಳೆದ ಜುಲೈ ತಿಂಗಳಲ್ಲಿ ಕೆಲಸದಿಂದ ಡಿಸ್‌ಮಿಸ್ ಮಾಡಿದ್ದರು. ಶ್ರೀ ಪದ್ಮನಾಭರು ದ. ಕ. ಜಿಲ್ಲಾ ಹೋಟೆಲ್ ವರ್ಕರ್ಸ್ ಯೂನಿಯನಿನ ಪ್ರಮುಖ ಕಾರ್ಯಕರ್ತರಾಗಿದ್ದುದೇ ಈ ಡಿಸ್‌ಮಿಸ್‌ಗೆ ಕಾರಣ ಎನ್ನಲಾಗಿದೆ. ಕೆಲಸದಿಂದ ಕಿತ್ತೊಗೆದ ಶ್ರೀ ಪದ್ಮನಾಭರಿಗೆ ತಿರುಗಿ ಕೆಲಸ ಕೊಡಿಸಬೇಕೆಂದು ಮಜೂರರ ಯೂನಿಯನ್ ಮಾಡಿದ ರಾಜಿಪ್ರಯತ್ನಗಳೆಲ್ಲ ವಿಫಲವಾದ ಬಳಿಕ ತಮ್ಮ ನ್ಯಾಯವಾದ ಕೇಳಿಕೆಗಳಿಗಾಗಿ ಮಜೂರರು ಆ ಹೋಟೇಲಿನ ಮುಂದೆ ಶಾಂತಿಯುತವಾದ ಸತ್ಯಾಗ್ರಹ ನಡೆಸುವ ತೀರ್ಮಾನ ಮಾಡಿ, ಅದರಂತೆ ಸತ್ಯಾಗ್ರಹ ನಡೆಸಲು ಮೆರವಣಿಗೆಯಾಗಿ ಬರುತ್ತಿದ್ದ 21 ಮಂದಿ ಮಜೂರರನ್ನು ಮೊದಲೇ ತಯಾರಿ ನಡೆಸಿ ಕಾದು ಕುಳಿತಿದ್ದರೆನ್ನಲಾದ ಪೋಲೀಸರು ಬಂಧಿಸಿ ಅವರ ಮೇಲೆ ಕ್ರಿ. ಪ್ರೊ. ಕೋಡಿನ 107ನೇ ಸೆಕ್ಷನನ್ವಯ (ಯೋಗ್ಯ ನಡತೆಗಾಗಿ ಒಂದು ವರುಷದ ಭದ್ರತೆ ಕೇಳುವ) ಖಟ್ಲೆಯೊಂದನ್ನು ರೆವಿನ್ಯೂ ಡಿವಿಜನಲ್ ಆಫೀಸರರ ಮುಂದೆ ಹೂಡಿದರು. ರೆ. ಡಿ. ಆಫೀಸರರೂ ಪೋಲೀಸ್ ಅಧಿಕಾರಿಗಳ ವಾದವನ್ನೇ ಎತ್ತಿಹಿಡಿದು ಈ ಮಜೂರರು ಒಳ್ಳೆಯ ನಡತೆಗಾಗಿ ಒಂದು ವರುಷದ ಭದ್ರತೆ ಕೊಡಬೇಕು ಇಲ್ಲವಾದರೆ ಒಂದು ವರುಷ ಕಠಿಣ ಸಜೆ ಅನುಭವಿಸಬೇಕೆಂಬ ತೀರ್ಪಿತ್ತರು.

ಈ ತೀರ್ಪಿನಿಂದ—ಹಾಗೂ ಪೋಲೀಸರ ವರ್ತನೆಯಿಂದ ಹೋಟೆಲ್ ಮಜೂರರು ಮಾತ್ರವಲ್ಲ ಇತರ ಸಂಘಟಿತ ಮಜೂರ ವರ್ಗವೂ ಕೆರಳಿತು. ಶಾಂತ ರೀತಿಯ ಸತ್ಯಾಗ್ರಹ ಮಾಡುವುದೂ ಮಹಾ ಅಪರಾಧವೆಂದಾದರೆ ಮಜೂರರ ಹಕ್ಕು ಭಾದ್ಯತೆಗಳೆಲ್ಲವೂ ಗಂಡಾಂತರಕ್ಕೀಡಾಗುವ ಸಂದರ್ಭವಿದೆ ಎಂದು ತಿಳಿದು ಈ ತೀರ್ಪಿನ ವಿರುದ್ಧ ಜಿಲ್ಲಾ ಕೋರ್ಟಿಗೆ ಅಪೀಲು ಮಾಡಲಾಯಿತು. ಇದೀಗ ಜಿಲ್ಲಾ ಕೋರ್ಟಿನ ತೀರ್ಪು ಬಂದಿದೆ. ಕೆಳಕೋರ್ಟಿನ ತೀರ್ಪನ್ನು ರದ್ದುಮಾಡಿ ಮಜೂರರನ್ನು ನಿರಪರಾಧಿಗಳೆಂದು ಜಿಲ್ಲಾ ಕೋರ್ಟು ತೀರ್ಮಾನಿಸಿದೆ.

ಇದು ನಿಜಕ್ಕೂ ಸಂಘಟಿತ ಮಜೂರ ವರ್ಗದ ವಿಜಯವಾಗಿದೆ. ಯಾಕೆಂದರೆ ಈ ವಿವಾದವನ್ನು ವ್ಯವಹರಿಸುವಲ್ಲಿ ಎಲ್ಲ ಮಜೂರ ಸಂಘಟನೆಗಳೂ ಹೆಚ್ಚಿನ ಆಸಕ್ತಿ ವಹಿಸಿ–ಇದು ಇಡಿಯ ಮಜೂರ ವರ್ಗದ ಪ್ರಶ್ನೆಯೆಂದು ಪರಿಗಣಿಸಿ ಸಹಾಯ ಸಹಕಾರಗಳನ್ನು ನೀಡಿದ್ದುವು.

ಇದೇ ಹೋರಾಟದ ಸಮಯದಲ್ಲಿ ಹೋಟೇಲಿನ ಮುಂದೆ "ಘೋಷಣೆಗಳನ್ನು ಹಾಕಿ" ಜನ ಮತ್ತು ವಾಹನ ಸಂಚಾರಕ್ಕೆ ತಡೆ ಮಾಡಿದರೆಂದು 16 ಮಂದಿ ಮಜೂರರ ಮೇಲೆ ಪ್ರತ್ಯೇಕ ಖಟ್ಲೆ ಹಾಕಲಾಗಿತ್ತು. ಈ ಖಟ್ಲೆಯಲ್ಲಿಯೂ ಆಪಾದಿತರನ್ನು ನಿರಪರಾಧಿಗಳೆಂದು ನ್ಯಾಯಾಧೀಶರು ಬಿಡುಗಡೆ ಮಾಡಿದ್ದಾರೆ.

ಈ ಹೋರಾಟದ ಸಂದರ್ಭದಲ್ಲಿ ಪೋಲಿಸ್ ಅಧಿಕಾರಿಗಳು ವಹಿಸಿದ್ದ ಮ್ಹಾಲಕರ ಪರ ವರ್ತನೆಯು ಜನರಲ್ಲಿ ವಿಶೇಷವಾದ ಸಂಶಯಕ್ಕೆ ಎಡೆಮಾಡಿಕೊಟ್ಟಿತ್ತು. ಪೋಲಿಸ್ ಅಧಿಕಾರಿಗಳೊಬ್ಬರು ಸದ್ರಿ ಹೊಟೇಲ್ ಮ್ಹಾಲಕರ ಬಾಡಿಗೆ ಮನೆಯಲ್ಲಿ ವಾಸಿಸುವವರೆಂದೂ, ಇನ್ನೊಬ್ಬ ಅಧಿಕಾರಿಗಳು ಈ ಮ್ಹಾಲಕರ ತೀರಾ ಆಪ್ತರೆಂದೂ ಹೇಳಲಾಗಿತ್ತು.

ಡಿಸ್‌ಮಿಸ್ ಮಾಡಲ್ಪಟ್ಟ ಮಜೂರ ಶ್ರೀ ಪದ್ಮನಾಭರ ವಿವಾದವು ಲೇಬರ್ ಕೋರ್ಟಿನ ಮುಂದೆ ವಿಚಾರಣೆಯಲ್ಲಿದೆ.

## ಜಾಮೀನು ಇಲ್ಲ

ಕಳೆದ ವಾರ ವರದಿಯಾದಂತೆ ಬಂಟ್ವಾಳದಲ್ಲಿ ಧನಿ–ಒಕ್ಕಲು ವಿವಾದವೊಂದರ ಸಂಬಂಧ ಬಂಧಿಸಲ್ಪಟ್ಟ ಬಂಟ್ವಾಳದ ಶ್ರೀಗಳಾದ ಬಿ. ವೀರಪ್ಪ ಸಾಲಿಯಾನ್, ದೊಂಬಯ್ಯ, ಕುಂದರ್, ನಾರಾಯಣ ಪೂಜಾರಿ, ನಾರಾಯಣ ಸಪಲ್ಯ, ಜೋಗು, ಶಿವಪ್ಪ ಪೂಜಾರಿ, ಜುವಾನ್ ಸೋಜ, ನಾರಾಯಣ ಕೊಟ್ಟಾರಿ ಮೊದಲಾದ 8 ಮಂದಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಬಂಟ್ವಾಳದ ಸೆಕೆಂಡ್ ಕ್ಲಾಸ್ ಮೆಜಿಸ್ಟ್ರೇಟರು ನಿರಾಕರಿಸಿದ್ದಾರೆ. ಇದೀಗ ಜಿಲ್ಲಾ ಕೋರ್ಟಿನಲ್ಲಿ ಅಪೀಲು ಮಾಡಲಾಗಿದೆ.

# ಲಂಚಗೂಳಿತನ ಹೆಚ್ಚುತ್ತಿದೆ

## ಜಿಲ್ಲಾ ಕಾಂಗ್ರೆಸ್ಸಿನ ಠರಾವು

ಮೈಸೂರು ಸರಕಾರದಲ್ಲಿ ಲಂಚಗೂಳಿತನ ಹೆಚ್ಚುತ್ತಿದೆ, ಮದ್ಯಪಾನ ಕಾಯಿದೆ ನಿಷ್ಫಲವಾಗುತ್ತಿದೆ ಎಂದು ಹೇಳಿದರೆ ಇದೆಲ್ಲ ಪ್ರತಿಪಕ್ಷಗಳ ಹುಸಿಬೊಬ್ಬೆ ಎಂದು ಮೈಸೂರಿನ ಮಂತ್ರಿಗಳು ಹೇಳುತ್ತಿರುವುದು ವಾಡಿಕೆ.

ಆದರೆ ಇತ್ತೀಚೆಗೆ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯೊಂದು ಜರಗಿದಾಗ ಅದರಲ್ಲಾದ ಕಾರ್ಯಕ್ರಮಗಳನ್ನು ಮಂಗಳೂರಿನ 'ನವಭಾರತ' ದೈನಿಕ ವರದಿ ಮಾಡಿದೆ. ಅದರ ಮುಖ್ಯಾಂಶ ಹೀಗಿದೆ:

'.........ಜಿಲ್ಲೆಯಲ್ಲಿ ಮದ್ಯಪಾನ ಕಾಯಿದೆಯು ಸರಿಯಾಗಿ ಕಾರ್ಯಗತವಾಗದಿರುವ, ಮತ್ತು ಸರಕಾರೀ ಇಲಾಖೆಗಳೊಳಗಣ ಲಂಚಕೋರತನದ ವಿಷಯ ಚರ್ಚೆಯಾದುವು. ಸ್ಥಳೀಯ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಇತರ ಸರಕಾರಿ ಇಲಾಖೆಗಳಿಗಿಂತ ಹೆಚ್ಚಿನ ಲಂಚಕೋರತನವು ನಡೆಯುವುದೆಂಬ ಬಲವಾದ ಆರೋಪವಿತ್ತೆಂದು ತಿಳಿದು ಬರುತ್ತದೆ'.

'ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿನ ವಿಷಯದಲ್ಲಿ ಹಲವು ವಾಹನ ಮ್ಹಾಲಕರನ್ನು ಕಂಡಾಗ ಲಂಚಗೂಳಿತನಕ್ಕೆ ಬಲವಾದ ಕ್ಷೇತ್ರವು ಬೆಳೆಯುತ್ತಿದೆಯೆಂದು ತಿಳಿಸುತ್ತಾರೆ. ಉದಾಹರಣೆಗಾಗಿ ಒಬ್ಬ ಚಿಕ್ಕ ಬಸ್ ಮ್ಹಾಲಕರು ತಮ್ಮ ಬಸ್ಸಿಗೆ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರರು ಕೊಟ್ಟ ತೊಂದರೆಗಳನ್ನು ವಿವರಿಸಿದ್ದಾರೆ. ಪಾಸಾದ ಬಸ್ಸನ್ನು ಒಂದೂವರೆ ತಿಂಗಳೊಳಗೆ ಪುನಃ ತರಿಸಿ, ಅದನ್ನು ಪುನಃ ಪರಿಶೀಲಿಸಲು ಹೇಳಿದ್ದಲ್ಲದೆ, ಪರಿಶೀಲಿಸಲು ಹೇಳುವಾಗಲೇ ಅದರ ಫಲವೇನೆಂದು ತಿಳಿಯುವ ಮೊದಲೇ ಅದನ್ನು ಚಲಾಯಿಸಲು ಬಿಡಬಾರದಾಗಿ ಕೂಡಲೇ ಹುಕುಂ ಕೊಟ್ಟು, ಆ ಚಿಕ್ಕ ಮ್ಹಾಲಕರಿಗೆ ಮೂರು ದಿನಗಳ ತನಕ ಉಪಟಳಕೊಟ್ಟರೆಂದೂ ತಾನು ಮಂತ್ರಿಯ ವರೆಗೂ ಹೋಗುವ ಜರೂರು ಬೀಳಬಹುದೆಂದು ಸ್ಪಷ್ಟ ಹೇಳಿದ ಮೇಲೆಯೇ, ಅದನ್ನು ನಡೆಸಲು ಹುಕುಂ ಕೊಟ್ಟರೆಂದೂ ತಿಳಿದುಬರುತ್ತದೆ'.

'ಹೊರ ಜಿಲ್ಲೆಗಳಲ್ಲಿ ಹಲವು ಕಡೆಗಳಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸೆಂದರೆ ಲಂಚಕೋರತನದ ಪರಮಾವಧಿಯೆಂಬ ಅಪವಾದವಿದೆ. ಹೆಣ್ಣು, ಹೊನ್ನು, ಮಾದಕಗಳು ಈ ಬಗ್ಗೆ ಉಪಯೋಗವಾದುದೂ ಇದೆಯೆಂದು ಹೇಳಲಾಗಿದೆ. ಇಂತಹ ಪರಿಸ್ಥಿತಿಗಳು ನಮ್ಮ ಜಿಲ್ಲೆಯಲ್ಲೂ ಬರುವ ಸಂಭಂಧವಿದೆಯೆ? ಎಂದು ಹಲವು ವಾಹನ ಮ್ಹಾಲಕರು ಗಾಬರಿಯಾದಂತಿದೆ........'

ಇದು ಜಿಲ್ಲಾ ಕಾಂಗ್ರೆಸ್ ಸಮಿತಿಯ ನಿರ್ಣಯದ ಮುಖ್ಯಾಂಶಗಳು. ಕಮ್ಯೂನಿಸ್ಟ್ ಪಾರ್ಟಿ ಇಂತಹ ಆರೋಪಗಳನ್ನು ಮಾಡಿದರೆ 'ಸುಳ್ಳು ಆರೋಪ'ಗಳೆಂದು ಹೇಳುವ ಮಂತ್ರಿವರ್ಯರುಗಳು ಈ ಬಗ್ಗೆ ಏನೆನ್ನುವರು?

ಇಂದು ಕೇವಲ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಮಾತ್ರವಲ್ಲ–ಎಲ್ಲ ಇಲಾಖೆಗಳಲ್ಲೂ ಲಂಚಗೂಳಿತನ ಹೆಚ್ಚಿದೆ ಎನ್ನಲಾಗುತ್ತಿದೆ.

# 6ನೇ ದ. ಕ. ಜಿಲ್ಲಾ ಮಜೂರ ಸಮ್ಮೇಳನಕ್ಕೆ ಭರದ ಸಿದ್ಧತೆ

6ನೇ ದ. ಕ. ಜಿಲ್ಲಾ ಮಜೂರ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಸಭೆಯೊಂದು ತಾ. 16—2—1958ರಂದು ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ವಾಗತ ಸಮಿತಿ ಕಾರ್ಯದರ್ಶಿಗಳು ಸಭೆ ಕರೆದ ಉದ್ದೇಶವನ್ನು ವಿವರಿಸಿದ ಬಳಿಕ ಸಮ್ಮೇಳನದ ಸಿದ್ಧತೆಯ ಕುರಿತು ಚರ್ಚೆ ನಡೆಯಿತು. ಸಮ್ಮೇಳನಕ್ಕೆ ಸುಮಾರು ರೂ. 2000 ಖರ್ಚು ಬರಬಹುದೆಂದು ಅಂದಾಜು ಮಾಡಲಾಗಿದೆ. ಸ್ವಾಗತ ಸಮಿತಿಗೆ 10,000 ಮಜೂರರನ್ನು ಸದಸ್ಯರನ್ನಾಗಿ ಸೇರಿಸಲು ತೀರ್ಮಾನವಾಗಿದೆ. ಸಮ್ಮೇಳನವನ್ನು ಮಾರ್ಚಿ ತಿಂಗಳ ತಾರೀಕು 16, 17 ಮತ್ತು 18 ಈ ಮೂರು ದಿನಗಳಲ್ಲಿ ಮಂಗಳೂರಲ್ಲಿ ಜರಗಿಸಲು ತೀರ್ಮಾನ ಮಾಡಲಾಗಿದೆ.

ಸಮ್ಮೇಳನದ ಅಧ್ಯಕ್ಷ ಸ್ಥಾನ ವಹಿಸಲು ಶ್ರೀ ಎಸ್. ಎಸ್. ಮಿರಾಜ್‌ಕರ್, ಶ್ರೀ ರಾಜಬಹದ್ದೂರ್ ಗೌಡ ಎಂ.ಪಿ., ಶ್ರೀ ಬಿ. ಟಿ. ರಣದಿವೆ ಇವರಲ್ಲೊಬ್ಬರನ್ನು ಆಮಂತ್ರಿಸಬೇಕಾಗಿದೆ. ಸಮ್ಮೇಳನವನ್ನು ಉದ್ಘಾಟಿಸಲು ಶ್ರೀ ಎಂ. ಸಿ. ನರಸಿಂಹನ್ ಎಂ.ಎಲ್.ಎ., ಅಥವಾ ಬಿ. ವಿ. ಕಕ್ಕಿಲ್ಲಾಯ ಇವರಲ್ಲೊಬ್ಬರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನವಾಗಿದೆ. ಸಮ್ಮೇಳನದ ಧ್ವಜ ವಂದನಾ ಕಾರ್ಯವನ್ನು ಡಾ| ಎ. ಸುಬ್ಬರಾವ್ ನೆರವೇರಿಸುವಂತೆ ಕೇಳಿಕೊಳ್ಳಲು ನಿರ್ಧರಿಸಲಾಗಿದೆ.

ಸಮ್ಮೇಳನಕ್ಕೆ ಭರದಿಂದ ಸಿದ್ಧತೆ ನಡೆದಿದೆ. ಬೇರೆ ಬೇರೆ ಕಮಿಟಿಗಳನ್ನು ರಚಿಸಲಾಗಿದೆ. ಶ್ರೀ ಎ. ಶಾಂತಾರಾಮ ಪೈಯವರು ಕಾರ್ಯದರ್ಶಿಯಾಗಿರುವ ಠರಾವು ಕಮಿಟಿ, ಶ್ರೀ ಬಿ. ನಾರಾಯಣರು ಕಾರ್ಯದರ್ಶಿಯಾಗಿರುವ ಪ್ರತಿನಿಧಿ ಸಮ್ಮೇಳನದ ಸ್ಥಳದ ಮತ್ತು ಪ್ರತಿನಿಧಿಗಳ ಊಟ–ವಸತಿಗಳ ಏರ್ಪಾಡು ಕಮಿಟಿ, ಶ್ರೀ ಬಿ. ಸಿ. ಶೇಕರ್ ಕಾರ್ಯದರ್ಶಿಯಾಗಿರುವ ಸ್ಟೇಜ್ ಕಮಿಟಿ, ಶ್ರೀ ಕೆ. ಮೋನಪ್ಪ ಶೆಟ್ಟರು ಕಾರ್ಯದರ್ಶಿಯಾಗಿರುವ ಪ್ರಚಾರ ಕಮಿಟಿ, ಶ್ರೀ ಬಿ. ಲಿಂಗಪ್ಪ ಸುವರ್ಣರು ಕಾರ್ಯದರ್ಶಿಯಾಗಿರುವ ಸ್ವಯಂಸೇವಕರ ಕಮಿಟಿ, ಶ್ರೀ ಯು. ಎನ್. ಶ್ರೀನಿವಾಸ ಭಟ್ಟ ಕಾರ್ಯದರ್ಶಿಯಾಗಿರುವ ಕಲಾಕಾರ್ಯಕ್ರಮಗಳ ಕಮಿಟಿಗಳನ್ನು ರಚಿಸಲಾಗಿದೆ. ಈ ಕಮಿಟಿಗಳು ಬೇಗನೇ ಸಭೆ ಸೇರಿ ವಹಿಸಿಕೊಂಡಿರುವ ಕೆಲಸಗಳನ್ನು ಪೂರೈಸಲು ಕಾರ್ಯಕ್ರಮ ವಹಿಸುವುದು.

ಸಮ್ಮೇಳನದ ಬಹಿರಂಗ ಸಭೆಯ ಕಾರ್ಯಕ್ರಮಗಳು ತಾ. 18—3—58 ರಂದು ಸಂಜೆ 5 ಘಂಟೆಯಿಂದ ಮರುದಿನ ಬೆಳಗ್ಗೆ 6 ಘಂಟೆಯ ವರೆಗೂ ನಡೆಯುವುದು. ಸಂಜೆ 5ರಿಂದ ರಾತ್ರಿ 10 ಘಂಟೆಯ ವರೆಗೆ ಸಭೆ ನಡೆಯುವುದು. ನಂತರ ನಾಟಕಗಳು, ಸಂಗೀತ ಕಚೇರಿ, ನೃತ್ಯ, ಕುಸ್ತಿ ಪ್ರದರ್ಶನ, ವ್ಯಾಯಾಮ ಪ್ರದರ್ಶನ, ಕ್ರಾಂತಿ ಗೀತೆಗಳು, ಛಾಯಾ ನಾಟಕ ಇತ್ಯಾದಿ ಕಲಾ ಕಾರ್ಯಕ್ರಮಗಳು ವಿವಿಧ ಕಲಾ ಮಂಡಲಿಗಳಿಂದಲೂ, ಮಜೂರ ಯುವಕರಿಂದಲೂ ಪ್ರದರ್ಶಿಸಲ್ಪಡುವುದು. ಎಲ್ಲಾ ಟ್ರೇಡ್ ಯೂನಿಯನ್‌ಗಳೂ, ಮಜೂರರೂ, ಮಹಾಜನರೂ, ಕಲಾಭಿಮಾನಿಗಳೂ, ಮಜೂರ ಪ್ರೇಮಿಗಳೂ, ಪ್ರಜಾಪ್ರಭುತ್ವವಾದಿಗಳೂ ಈ ಸಮ್ಮೇಳನ ಯಶಸ್ವಿಯಾಗುವಂತೆ ನೆರವಾಗಬೇಕಾಗಿ ಸ್ವಾಗತ ಸಮಿತಿ ಭಿನ್ನವಿಸಿಕೊಂಡಿದೆ.

# ಕಾರವಾರ ರೈತ ಸಮ್ಮೇಳನದ ನಿರ್ಣಯಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು)

**ಸಭೆಯಲ್ಲಿ ಪಾಸಾದ ಠರಾವುಗಳು :**

1 (೧) ಭೂಮಿಯ ಕಬಜೆ ತಪ್ಪಿಸು ವದನ್ನು ಸರಕಾರದವರು ಸುಗ್ರೀವಾಜ್ಞೆ ತೆಗೆದು ತಡೆಯಬೇಕು. (೨) ಯಾವ ಪರಿಸ್ಥಿತಿಯಲ್ಲೂ ರೈತರಿಂದ ಜಮೀನಿನ ಕಬಜೆಯನ್ನು ತಪ್ಪಿಸಲಾಗದು (೩) ಗೇಣಿಪ್ರಮಾಣವು ಮುಂಬೈ ಕಾಯ್ದೆಯಲ್ಲಿ ಇದ್ದಂತೆಯೇ ಉತ್ಪನ್ನದ ೫ ಪಟ್ಟು ಅಥವಾ ೧ ಎಕರೆಗೆ ಕಂದಾಯದ ೫ ಪಟ್ಟು ಅಥವಾ ೧ ಎಕರೆಗೆ ೨೦ ರೂಪಾಯಿ ಇರತಕ್ಕದ್ದು. (೪) ಇದೇ ಬರುವ ಏಪ್ರಿಲ್ ೧ನ್ನು ರೈತ ದಿನವೆಂದು ಸಾರಿ ಮುಂಬಯಿ ಕಾಯ್ದೆಯಲ್ಲಿದ್ದ ೩೨ನೇ ಕಲಮಿನ ಅಂಶವು ಕಾಯ್ದೆಯಲ್ಲಿರತಕ್ಕದ್ದು. (೫) ಮೈಸೂರು ಕಾಯ್ದೆಯು ಪ್ರಗತಿಪರ ಇರತಕ್ಕದ್ದು. ಗೇಣಿ ಮುಟ್ಟಿಸಿದರೂ ಪಾಯಿದೆಯಲ್ಲಿ ಮುಟ್ಟಿಸಿಲ್ಲವೆಂಬ ನೆಪದಿಂದ ತಪ್ಪಿಸಿರುವರೋ ಅಂಥವರ ಕಬಜೆಗಳು ಪರತ ಸಿಗುವ ಏರ್ಪಾಡಾಗಬೇಕು

2 (೧) ಪ್ರಾಥಮಿಕ ಶಿಕ್ಷಣವು ಮಾಫಿ ಸಿಗತಕ್ಕದ್ದು. (೨) ಯಾವ ವಿದ್ಯಾರ್ಥಿಯ ತಂದೆ ಯಾ ಪಾಲಕನ ವಾರ್ಷಿಕ ಉತ್ಪನ್ನವು ರೂ. ೧೨೦೦ಕ್ಕಿಂತ ಕಡಿಮೆ ಇರುವದೋ ಅಂಥವನಿಗೆ ಮಾಧ್ಯಮಿಕ ಶಾಲೆಯಲ್ಲಿ ಪೂರ್ಣ ಫೀ ಮಾಫಿ ಇರತಕ್ಕದ್ದು. (ಕೇರಳ ಕಮ್ಯೂನಿಸ್ಟ್ ಸರಕಾರದವರು ಇದನ್ನು ಅಮಲಿನಲ್ಲಿ ತಂದಿದ್ದಾರೆ).

3 ಕೋರ್ಟು ಕಚೇರಿ ಕಾಯ್ದೆ ಬಡವರಿಗೆ ಮಾಫಿ ಇರತಕ್ಕದ್ದು. ಯಾರ ವಾರ್ಷಿಕ ಉತ್ಪನ್ನವು ರೂ. ೧೨೦೦ಕ್ಕಿಂತ ಕಡಿಮೆ ಇರುತ್ತದೊ ಅಂಥವನಿಗೆ ಕೋರ್ಟು ಕಚೇರಿ ಕಾಯ್ದೆ ವ್ಯವಹಾರವು ಪುಕ್ಕಟೆ ಸಿಗುವಂತೆ ವ್ಯವಸ್ಥೆ ಮಾಡಬೇಕು. (ಇದನ್ನು ಕಮ್ಯೂನಿಸ್ಟ್ ಸರಕಾರದವರು ಅಮಲಿನಲ್ಲಿ ತಂದಿದ್ದಾರೆ.)

**ಸರಕಾರಿ ಜಾಗೆಯನ್ನು ಕೊಡಬೇಕು**

4 ಹೊಲ ಸಾಗುವಳಿ ಮತ್ತು ಮನೆ ಕಟ್ಟುವ ಬಗ್ಗೆ ಬಡರೈತರಿಗೆ ಮ ಮಿಾನುಗಾರ ಇತ್ಯಾದಿಯವರಿಗೆ ಜಂಗಲ ಮ ಪಡ ಜಾಗೆಯನ್ನು ತಡಮಾಡದೆ ಕೊಡುವ ಏರ್ಪಾಡಾಗಬೇಕು. ಇಂಥ ಜಾಗೆ ಕೊಟ್ಟು ಮನೆ ಕಟ್ಟುವದಕ್ಕೋಸ್ಕರ ಬಡವರಿಗೆ ದೀರ್ಘ ಕಂತಿನ ಹಣ ಒದಗಿಸಬೇಕು.

**5. ಔಷಧೋಪಚಾರಗಳು**

ಕಾರವಾರ ಶಹರದಿಂದ ಅಥವಾ ಸರಕಾರಿ ದವಾಖಾನೆಯಿಂದ 4 ಮೈಲು ಹೊರಗಿನ ಹಳ್ಳಿಯ ಜನರಿಗೆ ಮಾಫಿ ಔಷಧೋಪಚಾರವು ಸಿಗುವಂತೆ ಸಂಚಾರಿ ದವಾಖಾನೆಯನ್ನು ಪ್ರಾರಂಭಿಸಬೇಕು. ಹಾಗೂ ಐದು ಹಳ್ಳಿಗೊಂದು ಇಲ್ಲವೆ 500 ಜನವಸತಿ ಇರುವ ಭಾಗಕ್ಕೊಂದು ಸರಕಾರೀ ದವಾಖಾನೆಯನ್ನು ಇಡಬೇಕು. ಈವರೆಗೆ ಕೆಲವೆಡೆಯಲ್ಲಿ ಸರಕಾರದಿಂದ ನಡಿಸಲ್ಪಡುತ್ತಿರುವ ದವಾಖಾನೆಯೆಂದರೆ ಫೀರೂಪದಿಂದ, ಬಡ ಜನರನ್ನು ಸುಲಿಯುವ ಕೇಂದ್ರವೇ ಆಗಿರುತ್ತದೆ. ಇಂಥ ದುರ್ವ್ಯವಸ್ಥೆಯನ್ನು ಕೂಡಲೇ ನಿಲ್ಲಿಸಬೇಕೆಂತ ಈ ಸಭೆಯು ಸರಕಾರಕ್ಕೆ ಕೇಳಿಕೊಳ್ಳುತ್ತದೆ.

**6. ಪಡಭೂಮಿಯನ್ನು ಸಾಗುವಳಿಯಲ್ಲಿ ತರುವುದು**

ಎಷ್ಟೋ ವರ್ಷಗಳ ಹಿಂದೆ ಅಮೂಲ್ಯ ಲಕ್ಷಗಟ್ಟಲೆ ಎಕರೆ ಭೂಮಿಯು ಈಗ ಪಡಬಿದ್ದಿದ್ದು ಮತ್ತು ಇಂದಿಗೆ ಯೋಗ್ಯ ಲಾಡಿಯ ವಿನಹ ಸಂಪೂರ್ಣ ಬೆಳೆಯನ್ನು ತಕ್ಕೊಳ್ಳಲು ಶಕ್ಯವಿಲ್ಲದ ಭೂಮಿಯನ್ನು ಸರಕಾರವು ಕೂಡಲೇ ತಾಬೆಯಲ್ಲಿ ವಹಿಸಿಕೊಂಡು ಸರಕಾರದಿಂದಲೇ ಭೂಮಿಯ (ಬಾಂದಕಾಮು) ವಗೈರೆ ಪೂರ್ಣ ದುರಸ್ತಿಯನ್ನು ಮಾಡಿಸಿ ಸದರೀ ಭೂಮಿಯನ್ನು ಬಡರೈತರಿಗೆ ಮ ರೈತಾಪಿ ಕೂಲಿಗಾರರಿಗೆ ಕೊಡಿಸಬೇಕೆಂತ ಈ ಸಭೆಯು ಸೂಚಿಸುತ್ತದೆ.

7. ಸರಕಾರದವರು ಬೆಳೆಯ ರೋಗ ಪ್ರತಿಬಾಧಕ ಸಂಚಾರಿಪಥವನ್ನು ರಚಿಸಿ ರೈತರಿಗೆ ಹಂಗಾಮಿನಲ್ಲಿ ಸಹಾಯ ಒದಗಿಸುವದು ಅತ್ಯವಶ್ಯಕವಿರುತ್ತದೆಂದು ಈ ಸಭೆಗೆ ಕಂಡುಬಂದಿದೆ. ಆದ್ದರಿಂದ ಸರಕಾರದವರು ಇದನ್ನು ಕಾರ್ಯಾಚರಣೆಯಲ್ಲಿ ತರುವರೆ ಈ ಸಭೆಯು ಕೇಳಿಕೊಳ್ಳುತ್ತದೆ.

**8. ಜಂಗಲ ಸವಲತ್ತುಗಳು, ಪರಮಿಾಟ ಫೀ, ಇತ್ಯಾದಿ**

ಬೇಲಿಯ ಮುಳ್ಳು, ಜಂಗಲಕಟ್ಟಿಗೆ, ಬಿದುರು, ಜಿತ್ತ, ಮನೆಕಟ್ಟಲು ಉಪಯೋಗಿಸುವ ಕಟ್ಟಿಗೆ ಮುಂತಾದ ಅತ್ಯವಶ್ಯಕ ವಸ್ತುಗಳನ್ನು ತರಿಸಿಕೊಳ್ಳಲಿಕ್ಕೆ ಹಿಂದಿನಿಂದಲೂ ಇದ್ದ ಸವಲತ್ತುಗಳನ್ನು ತೆಗೆದು ಹಾಕಿ ಪರಮಿಾಟ ಫೀ ವಗೈರೆ ಹೆಚ್ಚಿಸಿದಕ್ಕೆ ಜನತೆಯು ದುಃಖ ವ್ಯಕ್ತಪಡಿಸುತ್ತಿದೆ ಮತ್ತು ಸರಕಾರಕ್ಕೆ ಈ ಅನ್ಯಾಯ ದೂರ ಮಾಡಿ ಮೊದಲಿದ್ದಂತೆಯೇ ಸವಲತ್ತುಗಳನ್ನು ತಿರುಗಿ ಕೊಡುವರೇ, ಈ ಸಭೆಯು ತಿಳಿಸುತ್ತದೆ. ಹಾಗೂ ಈ ಅನ್ಯಾಯ ದೂರ ಮಾಡದಿದ್ದಲ್ಲಿ ಸರಕಾರದ ವಿರುದ್ಧ ಜಂಗಲ ಸತ್ಯಾಗ್ರಹ ಹೂಡುವ ಬಗ್ಗೆ ಈ ಸಭೆಯು ಠರಾಯಿಸುತ್ತಿದೆ.

9. ಮೈಸೂರು ರಾಜ್ಯದ ಉಪಗೃಹ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಗೌಡ ಪಾಟೀಲ ಇವರು 26—1—58ಕ್ಕೆ ಪ್ರಜಾಸತ್ತಾತ್ಮಕ ದಿನದಂದು ಬೀದರದಲ್ಲಿ ಭಾಷಾವಾರು ಪ್ರಾಂತ ರಚನೆಯ ವಿಷಯದಲ್ಲಿ ಮಾತಾಡುತ್ತಿರುವಾಗ ಮರಾಠಿ ಜನತೆಯು ಇನ್ನು ಮುಂದೆ ಭಾಷವಾರು ಪ್ರಾಂತದ ಚಳವಳಿ ಮಾಡಲು ಶಕ್ಯವಿಲ್ಲ ಮತ್ತು ಆಚಾರ, ವಿಚಾರ ಸಂಸ್ಕೃತಿ ಇಲ್ಲದ ರೈತ ಮತ್ತು ಬುದ್ಧಿಜೀವಿ ಸುಶಿಕ್ಷಿತ ಜನರ ಮತ್ತು ಅವರನ್ನು ಅವಲಂಭಿಸಿದವನ ಮೇಲೆ ಹೀಗೆ ಚಳವಳಿ ಮಾಡಿದಲ್ಲಿ ಅವರ ಮೇಲೆ ನಾವು ಗೋಳಿಬಾರ ಹಾಗೂ ಲಾಠಿ ಹಲ್ಲೆ ವಗೈರೆ ಪ್ರಯೋಗ ಮಾಡಿ ಅವರ ಚಳವಳಿಯನ್ನು ಹತ್ತಿಕ್ಕುವೆವು ಎಂದು ಧಮಕಿ ಕೊಟ್ಟಿರುವುದನ್ನು ನಮ್ಮ ಕಿಸಾನ ಸಭೆಯು ಖಂಡನೆ ಮಾಡುತ್ತದೆ.

**10. ಪ್ರಾಂತರಚನೆ**

ಸರಕಾರೀ ಕಾರಭಾರವು ಲೋಕಸಭೆಯೊಳಗಿಂದಲೇ ನಡೆಸಿದ ಹೊರತು ಬಡಜನ ಸಮಾಜಕ್ಕೆ ಜನತಾರಾಜ್ಯದ ಸಂಪೂರ್ಣ ಸ್ವಾತಂತ್ರ್ಯವು ಉಪಭೋಗಿಸಲು ಶಕ್ಯವಿಲ್ಲ. ಆದಕಾರಣ ಮೈಸೂರು ಮುಂಬೈ ರಾಜ್ಯದಲ್ಲಿಯ ಗಡಿಯ ಮೇಲಿರುವ ಬೆಳಗಾಂವ, ಕಾರವಾರ, ನಿಪಾಣಿ ಮುಂತಾದ ಮರಾಠಿ ವಿಭಾಗಗಳನ್ನು ಸಮಿಾಪದ ಮರಾಠಿ ವಿಭಾಗಕ್ಕೆ ಕೂಡಲೇ ಜೋಡಿಸಬೇಕು. ಅದರಂತೆಯೇ ಭಾಷಾ ತತ್ವದ ತಳಹದಿಯ ಮೇಲೆ ಗ್ರಾಮವೇ ಘಟಕ ಹಿಡಿದು ಎಲ್ಲ ಭಾಷಾವಾರು ರಾಜ್ಯಗಳನ್ನು ನಿರ್ಮಾಣ ಮಾಡಬೇಕು ಮತ್ತು ಪ್ರತಿ ರಾಜ್ಯದ ಲ್ಲಿಯ ಗಡಿಯನ್ನು ನಿಶ್ಚಿತ ಮಾಡಬೇಕು. ಹೀಗೆ ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ಈ ಸಭೆಯು ಕೇಳಿಕೊಳ್ಳುತ್ತದೆ.

## ರೈತರಂಗ

# ಯೋಗ್ಯ ಭೂಸುಧಾರಣೆ ಜ್ಯಾರಿಗೊಳಿಸುವಂತೆ ಸರಕಾರಕ್ಕೆ ರೈತರ ಒತ್ತಾಯ

### ರೈತರ ಸಭೆಗಳು

**ಪುತ್ತೂರು**

ತಾ. 20-2-58ರಂದು ದ. ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎ. ಕೃಷ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಪುತ್ತೂರು ಪೇಟೆಯಲ್ಲಿ ರೈತರ ಸಭೆ ಜರಗಿತ್ತು. ಕೋಡಿಪಾಡಿ ಗ್ರಾಮ ರೈತ ಸಂಘದ ಅಧ್ಯಕ್ಷ ಶ್ರೀ ಲಕ್ಷ್ಮಿ ನಾರಾಯಣ ರಾಯರು ಸಭೆಯನ್ನು ಕರೆದ ಉದ್ದೇಶದ ಕುರಿತು ಎರಡು ಮಾತುಗಳನ್ನಾಡಿ, ಶ್ರೀ ಕೃಷ್ಣ ಶೆಟ್ರನ್ನು ಸಭಾಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಎಂ. ಎಚ್. ಕೃಷ್ಣಪ್ಪನವರು ಜತ್ತಿ ಸಮಿತಿಯ ವರದಿಯಿಂದ ರೈತರಿಗಾಗುವ ಗುಣದೋಷಗಳನ್ನು ವಿವರಿಸಿ, ಇಡೀ ಕರ್ನಾಟಕ ಪ್ರಾಂತಕ್ಕೆ ಅನ್ವಯಿಸುವ ಪ್ರಗತಿಶೀಲ ಭೂಸುಧಾರಣಾ ಮಸೂದೆಯನ್ನು ಕೂಡಲೇ ಜಾರಿಗೊಳಿಸುವ ಕುರಿತು ಮಾತನಾಡಿ, ರಾಷ್ಟ್ರಹಿತವನ್ನು ಬಯಸುವ ಸರ್ವರೂ ಬೆಂಬಲ ನೀಡುವಂತೆ ವಿನಂತಿಸಿ ಕೊಂಡರು. ತಾಲೂಕು ರೈತ ಸಂಘದ ಅಧ್ಯಕ್ಷ ಕೆ. ಸಂಜೀವ ರೈಯವರು, ರೈತರೆಲ್ಲರೂ ಗ್ರಾಮ ಗ್ರಾಮಗಳಲ್ಲಿ ಸಂಘಟಿತರಾಗುವಂತೆ ಪ್ರೋತ್ಸಾಹಿಸಿದರು. ಆ ಮೇಲೆ ಸಭಾಧ್ಯಕ್ಷರು ಜಿಲ್ಲೆಯ ಭೂಮಾಲಿಕರು ಸರ್ವವಿಧದಿಂದಲೂ ಭೂಸುಧಾರಣೆಯನ್ನು ವಿರೋಧಿಸುವ ನೀತಿಯನ್ನು ತೀವ್ರವಾಗಿ ಖಂಡಿಸಿ ಮಾತನಾಡಿದರು.

**ಮುನ್ನೂರು ಗ್ರಾಮ**

ತಾ. 17—2—58ನೇ ಸೋಮವಾರ ಸಂಜೆ ಘಂಟೆ 6ಕ್ಕೆ ಮುನ್ನೂರು ಗ್ರಾಮದ ಮಜಲ್‌ದೋಟ ಎಂಬಲ್ಲಿ ಜಿಲ್ಲಾ ರೈತ ಸಂಘದ ನಿರ್ಣಯದಂತೆ ರೈತರ ಸಭೆ ಜರಗಿತು. ಅಧ್ಯಕ್ಷ ಸ್ಥಾನವನ್ನು ಬೆರಿಕೆ ಕೃಷ್ಣಪ್ಪ ಅಡ್ಯಂತಾಯರು ವಹಿಸಿದ್ದರು. ಪ್ರಾರಂಭದಲ್ಲಿ ಸಭೆಯ ಉದ್ದೇಶವನ್ನು ಶ್ರೀ ಕೆ ನಾರಾಯಣ ನ್ಯಾಕರು ವಿವರಿಸಿದರು. ಬಳಿಕ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಶ್ರೀ ಎಂ. ಎಚ್. ಕೃಷ್ಣಪ್ಪನವರು ಭೂಸುಧಾರಣೆ ಬರುವ ಅವಶ್ಯಕತೆಯ ಕುರಿತು ಭಾಷಣವಿತ್ತರಲ್ಲದೆ ಕ.ಪ್ರಾ. ರೈತ ಸಂಘದ ನಿರ್ಣಯದಂತೆ ಈ ವಾರ ಜಿಲ್ಲೆಯಾದ್ಯಂತ ಇಂತಹ ಸಭೆ ಮೆರವಣಿಗೆಗಳನ್ನು ರೈತರು ನಡೆಸಿ ಸರಕಾರವನ್ನು ಒತ್ತಾಯಿಸುವುದು ಬಹಳ ಅಗತ್ಯವೆಂದರು. ತಾ. 23—2—58ರಂದು ಜರಗಲಿರುವ ಮಂಗಳೂರು ಕೇಂದ್ರ ಮೈದಾನಿನ ಸಭೆಯನ್ನು ಯಶಸ್ವಿಗೊಳಿಸಲು ಎಲ್ಲಾ ರೈತರು ಭಾಗವಹಿಸಬೇಕಾಗಿ ಕೇಳಿಕೊಂಡರು. ಬಳಿಕ ಶ್ರೀ ಬಿ. ಕೊರಗಪ್ಪ ರೈಯವರು ಮಾತನಾಡುತ್ತಾ ಇತ್ತೀಚೆಗೆ ಇಲ್ಲಿಯ ಭೂಮಾಲಕರು ಬೆಂಗಳೂರಲ್ಲಿ ಸಭೆ ಸೇರಿ ಯೋಗ್ಯ ಭೂಸುಧಾರಣೆ ಬೇಕಾರದಾಗಿ ಚಳುವಳಿ ನಡೆಸುವ ಅವರ ಪ್ರತಿಗಾಮಿ ಧೋರಣೆಯನ್ನು ಖಂಡಿಸಿದರು. ಭೂಮಾಲಿಕರ ಘೋಷಣೆಗೆ ವಿರುದ್ಧವಾಗಿ ನಾಡಿನ ರೈತರು ಚಳವಳಿ ನಡೆಸಿದರೆ ಮಾತ್ರ ಯೋಗ್ಯ ಭೂಶಾಸನ ಜಾರಿಯಾಗಲು ಸಾಧ್ಯವೆಂದು ಅದಕ್ಕಾಗಿ ಪ್ರತೀಗ್ರಾಮಗಳ ರೈತರು ಒಗ್ಗಟ್ಟಾಗಿ ಈವರೆಗೆ ನಡೆಯದಿರದಂತಹ ಐಕ್ಯಚಳುವಳಿ ನಡೆಸಲು ಮುಂದೆ ಬರಬೇಕೆಂದು ಕೇಳಿಕೊಂಡರು. ಕೊನೆಗೆ ಶ್ರೀ ಕೆ. ನಾರಾಯಣನ್ಯಾಕರು ಧನ್ಯವಾದಗಳನ್ನರ್ಪಿಸಿದರು. ಪ್ರಾಂತಕ್ಕೆ ಯೋಗ್ಯ ಭೂಸುಧಾರಣಾ ಶಾಸನವನ್ನು ಈ ಬಾರಿಯೇ ಜಾರಿಗೊಳಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಠರಾವನ್ನು ಸಭೆಯಲ್ಲಿ ಪಾಸು ಮಾಡಲಾಯಿತು.

**ಬೋಳಂತೂರು ಗ್ರಾಮ**

ತಾ. 14-2-58ನೇ ಶುಕ್ರವಾರ ಪುತ್ತೂರು ತಾಲೂಕಿನ ಬೋಳಂತೂರು ಗ್ರಾಮದಲ್ಲಿ ರೈತರ ಸಭೆ ಜರಗಿತ್ತು. ಭೂಸುಧಾರಣಾ ಮಸೂದೆಯು ಕೂಡಲೇ ಜಾರಿಗೊಳಿಸುವಂತೆ ನಿರ್ಣಯಗಳಾದುವು.

**ಕೆದಿಲ ಗ್ರಾಮ**

ತಾ. 15-2-58ರಂದು ತಾಲೂಕಿನ ಕೆದಿಲ ಗ್ರಾಮದಲ್ಲಿ ರೈತರ ಸಭೆ ಜರಗಿ, ರೈತರು ಸಂಘಟಿತರಾಗಿ, ಭೂಸುಧಾರಣಾ ಮಸೂದೆ ಕೂಡಲೇ ಜಾರಿಗೊಳಿಸುವಂತೆ, ಮೈಸೂರು ಸರಕಾರವನ್ನು ಒತ್ತಾಯಿಸುವ ನಿರ್ಣಯಗಳಾದುವು.

**ಬೆಳ್ಮ ಗ್ರಾಮ**

ತಾ. 16-2-58ರಂದು ಮಂಗಳೂರು ತಾಲೂಕು ಬೆಳ್ಮ ಗ್ರಾಮದ ರೈತರ ಸಭೆಯು "ತೋಟ" ಎಂಬಲ್ಲಿ ಶ್ರೀ ಬಿ. ಸೇಸಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಸಭೆ ಕರೆದ ಉದ್ದೇಶವನ್ನು ಕ್ರಿಯಾಸಮಿತಿಯ ಕಾರ್ಯದರ್ಶಿ ಜ॥ ಬಿ. ಎ. ಮಮ್ಮಿಯವರು ವಿವರಿಸಿದರಲ್ಲದೆ, ರೈತರ ಚಟುವಟಿಕೆಗಳ ವರದಿಯನ್ನೂ- ಮುಂದಕ್ಕೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನೂ ಹೇಳಿದರು. ಶ್ರೀ ಕೆ. ನಾರಾಯಣ ನ್ಯಾಕರು ಕರ್ನಾಟಕ ಪ್ರಾಂತ ರೈತಸಮಿತಿಯ ನಿರ್ಣಯಗಳನ್ನು, ಈ ವಾರದಲ್ಲಿ ಪ್ರಾಂತದಾದ್ಯಂತ ರೈತರು ಸಭೆ,

(೬ನೇ ಪುಟ ನೋಡಿ)

# ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: ಪಂಡಿತ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

(ರಂಗ ಶೂನ್ಯವಾಗಿದೆ. ಮೇಜಿನ ಮೇಲೆ ರಾಜು ನಿರಾಕರಿಸಿದ, ಗೋಪಿ ಬಿಟ್ಟು ಹೋದ, ಕಾಫಿಯ ಲೋಟ ಇದೆ. ಸ್ವಲ್ಪ ಹೊತ್ತು ಕಳೆದಾಗ ರಾಮಪ್ಪ, ಆತನ ಹಿಂದೆ ನಾರಾಯಣಪ್ಪ ಮತ್ತು ಶಾಸ್ತ್ರಿ ಪ್ರವೇಶಿಸುತ್ತಾರೆ. ನಾರಾಯಣಪ್ಪನೂ ಶಾಸ್ತ್ರಿಯೂ ಯಾರನ್ನೋ ಹುಡುಕಾಡುವಂತೆ ಸುತ್ತಲು ನೋಡುತ್ತಾರೆ. ರಾಮಪ್ಪ ಮೇಜಿನ ಮೇಲಿರುವ ಎರಡು ಲೋಟಗಳನ್ನೇ ನೋಡುತ್ತಾನೆ. ಅವನು ನಾರಾಯಣಪ್ಪನ ಮತ್ತು ಶಾಸ್ತ್ರಿಯ ಮುಖ ನೋಡುತ್ತಾನೆ. ಯಾರು ಏನೂ ಮಾತಾಡುವುದಿಲ್ಲ.)

ರಾಮಪ್ಪ: (ಸ್ವಲ್ಪ ಕಳೆದು) ಗೋಪೀ— (ಕರೆಯುತ್ತಾನೆ.)

ಗೋಪಿ: (ಒಳಗಿನಿಂದ) ಬಂದೇ-(ಗೋಪೀ ಬರುತ್ತಾಳೆ. ಮುಖ ಮ್ಲಾನವಾಗಿದೆ.)

ರಾಮಪ್ಪ: (ಸಾಧಾರಣ ಮಟನಲ್ಲಿ) ಒಳಗೆ ಯಾರಿದ್ದಾರೆ?

ಗೋಪಿ: ಯಾರು ಇಲ್ವಲ್ಲ!

ರಾಮಪ್ಪ: ಯಾರೋ ಮಾತಾಡಿದ ಹಾಗೆ ಕೇಳಿಸ್ತು!

ಗೋಪಿ: ಹೊರಗೋ ಏನೊ? ಒಳಗೆ ಸುಬ್ಬ ಮಾತ್ರ ಇದಾನೆ!

ರಾಮಪ್ಪ: ಅವನೇ ಇರಬಹುದು ಮಾತಾಡಿದ್ದು. ಹೋಗ್ಲಿ ಬಿಡು! (ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ. ನಾರಾಯಣಪ್ಪನೂ ಶಾಸ್ತ್ರಿಯೂ ಬೆಂಚಿನಲ್ಲಿ ಕುಳಿತು ಕೊಳ್ಳುತ್ತಾರೆ. ಗೋಪಿ ನಿಂತುಕೊಂಡೇ ಇದ್ದಾಳೆ)

ರಾಮಪ್ಪ: (ಗೋಪಿಯೊಡನೆ) ಯಾಕೆ ನಿಂತು ಕೊಂಡಿದ್ದಿ?

(ಗೋಪಿ ಒಳಗೆ ಹೋಗುತ್ತಾಳೆ)

ರಾಮಪ್ಪ: (ಬೆಂಚಿನಲ್ಲಿ ಕುಳಿತಿರುವವರ ಕಡೆಗೆ ನೋಡಿ) ಹಂಗಾದ್ರೆ—ನೀವು ಹೋಗಿ! ನಾಳೆ ನೋಡಾನ.

ಶಾಸ್ತ್ರಿ: ನನ್ನ ಸಂಗ್ತಿ—

ರಾಮಪ್ಪ: ಆ ಸೋಂಪ ಇಷ್ಟೆಲ್ಲ ಮಾಡೋದು—ನಾ ನೋಡ್ತೀನಿ!

ಶಾಸ್ತ್ರಿ: ಅವ ಕಮ್ಯೂನಿಸ್ಟು! ನನ್ ಮುಕ್ಕಿಗೆ. ಬುದ್ಧಿಯಿಲ್ಲ — ವಿದ್ಯೆಯಿಲ್ಲ! ಅವ ಅಂದಂಗೆ ಕುಣೀತಾವೆ ಸ್ವಾಮಿ!

(ನಾರಾಯಣಪ್ಪ ಲೆಕ್ಕ ಪುಸ್ತಕ ಬಿಡಿಸಿ ನೋಡುತ್ತಿದ್ದಾನೆ)

ರಾಮಪ್ಪ: ಸುಮ್ನೆ ಗಲಾಟೆಯಾಕೇಂತ ಬಿಟ್ಟಿದ್ದೀನಿ! ಇನ್ನು ಬಿಡೋಕಾಗಲ್ಲ. ಕೂಲಿ ಜಾಸ್ತಿ ಬೇಕಂತೆ—ಅವರಿಗೆ! ನಮ್ಮ ಗದ್ದೆ ಮಾಡುವವರು ಮೂರ್‌ರಲ್ಲಿ ಒಂದ್ ಭಾಗವೇ ಕೊಡೋದಂತೆ! ಎಲ್ಲ ಆ ಸೋಂಪನ ಪಿಕ್‌ಲಾಟ!

ಶಾಸ್ತ್ರಿ: ಕೂಲಿ ಸಾಲ್ದೆ? ಹನ್ನೆರಡಾಣೇಂತಂದ್ರೆ ಎಪ್ಪತ್ತೈದು ನಯೆ ಪೈಸೆ! ಧಾರಾಳ ಆಯ್ತು—ಧಾರಾಳ! (ಹಲ್ಲು ಕಿರಿಯುತ್ತಾನೆ)

ರಾಮಪ್ಪ: ಅಲ್ಲ ಶಾಸ್ತ್ರಿಗಳೇ? ಮದ್ವೆ ಯೋಚನೆಯಲ್ಲಿ ಮತ್ತೆ ಮರ್‍ತೇ ಬಿಟ್ಟಿದೀರಲ್ಲಾ!

ಶಾಸ್ತ್ರಿ: ಎಲ್ಲಾದ್ರೂ ಉಂಟೆ? ಅದೆಲ್ಲ ಏರ್ಪಾಡಾಗಿದೆ. ನಾಡಿದ್ದು ಸಭೆ. ಮಾಜೀ ಮುಖ್ಯ ಮಂತ್ರಿಗಳೇ ಬರ್ತಾರೆ!

ನಾರಾಯಣಪ್ಪ: (ಪುಸ್ತಕದಿಂದ ಕಣ್ಣೆತ್ತಿ, ಶಾಸ್ತ್ರಿಯನ್ನು ನೋಡುತ್ತ) ಜಾಗ್ರತೆ ಮಾಡ್ಬೇಕ್ರೀ—ಶಾಸ್ತ್ರಿಗಳೇ! (ಶಾಸ್ತ್ರಿಯನ್ನು ಬೆರಳಿನಿಂದ ತಿವಿದು) ಏನಂತೀರಾ—ಜಾಗ್ರತೆ ಮಾಡ್ಬೇಕೂಂತ!

ಶಾಸ್ತ್ರಿ: ಅದು ನಂಗೆ ಬಿಟ್ಬಿಡಿ!

ರಾಮಪ್ಪ: ಹಾಗಲ್ಲ ಶಾಸ್ತ್ರಿಗಳೇ! ಕೂಲಿಯವರು, ರೈತರೂಂತ ಅಂದ್ಮೇಲೆ, ಯಾವ ಸಂಘನೇ ಮಾಡಿದ್ರೂ ಕಿರ್‌ಗಿ—ಕಿರ್‌ಗಿ—ಕಿರ್‌ಗಿ (ಕೈಯಲ್ಲಿ ಸುತ್ತುಸುತ್ತು ತಿರುಗಿಸಿ ತೋರಿಸುತ್ತ) ಕಮ್ಯೂನಿಸ್ಟರ ಬಲೆಗೆ ಬೀಳೋದು—ಕಡೆಗೆ!

ನಾರಾಯಣಪ್ಪ: ಅದೇ ನಾನಂದಿದ್ದು! ಅಲ್ಲೀಗೆ ಮಾಜಿ ಮುಖ್ಯ ಮಂತ್ರಿಗಳಿಗೆ ಸಭೆಯಲ್ಲಿ ಮಂಗಳಾರ್‍ತಿ ಮಾಡಿದ್ರೂ ಮಾಡಿಬಿಟ್ಟಾರು—ಆ ಸಹ್ ಮುಕ್ಳು!

ಶಾಸ್ತ್ರಿ: ಛೇ! ಛೇ! ಅದೆಂಗಾಗತದ್ರಿ—ನಾನಿರ್‍ವಾಗ?

ರಾಮಪ್ಪ: ಸ್ವಲ್ಪ ಎಚ್ಚರಿಕೆಯಿಂದ ನೋಡ್ಕೊಂಡಿರಿ! ಆ ಕಮ್ಯೂನಿಸ್ಟನ್ನು ಮೊದ್ಲಿಂದ್ಲೆ ಹತ್ರ ಸೇರ್‌ಸ್ಕೋ ಬಾರ್‍ದು.

ನಾರಾಯಣಪ್ಪ: (ಎದ್ದು) ಹಂಗಾರೆ ನಾವು ಹೋಗಿ ಬರ್‍ಲೆ?

(ಶಾಸ್ತ್ರಿಯೂ ಏಳ್ತಾನೆ)

ರಾಮಪ್ಪ: ಹಂಗೇ ಮಾಡಿ.

ಶಾಸ್ತ್ರಿ: ನಮಸ್ಕಾರ (ಬಗ್ಗಿ ನಮಸ್ಕಾರ ಮಾಡ್ತಾನೆ.)

(ನಾರಾಯಣಪ್ಪನೂ ಶಾಸ್ತ್ರಿಯೂ ಹೋಗುತ್ತಾರೆ. ರಾಮಪ್ಪ ಕುರ್ಚಿಯಲ್ಲಿ ಕುಳಿತುಕೊಂಡು ಏನೋ ಗಾಢವಾಗಿ ಯೋಚಿಸುತ್ತಿದ್ದಾನೆ. ಮೇಜಿನ ಮೇಲಿರುವ ಲೋಟಗಳನ್ನು ನೋಡುತ್ತಾನೆ.)

ರಾಮಪ್ಪ: ಸುಬ್ಬಾ—

ಸುಬ್ಬ: (ಒಳಗಿಂದ) ಓ—ಬಂದೇ— (ಬರ್‍ತಾನೆ)

ರಾಮಪ್ಪ: ಗೋಪೀನ ಇಲ್ಲಿ ಬರಹೇಳು (ತಿರುಗಿ ಯೋಚನೆಯಲ್ಲಿ ಮುಳುಗುತ್ತಾನೆ.)

(ಸುಬ್ಬ ಒಳಗೆ ಹೋಗುತ್ತಾನೆ ಸ್ವಲ್ಪ ಕಳೆದು ಗೋಪಿ ಪ್ರವೇಶಿಸುತ್ತಾಳೆ.)

ಗೋಪಿ: ಬರಹೇಳಿದಿರಾ?

ರಾಮಪ್ಪ: ಹೌದು. (ದೂರಕ್ಕೆ ನೋಡಿಕೊಂಡು, ಗಂಭೀರತೆ ನಟಿಸುತ್ತ) ಆ ಕಾಫಿ ಕುಡಿ.

(ಗೋಪಿಯ ಮುಖ ಒಮ್ಮೆ ಕಪ್ಪಾಗುತ್ತದೆ. ಮತ್ತೆ, ಅವಳು ಮೇಜಿನ ಮೇಲಿರುವ ಲೋಟಗಳನ್ನು ತೆಗೆದು ಒಳಗೆ ಇಟ್ಟು ಬರುತ್ತಾಳೆ)

ರಾಮಪ್ಪ: ಕಾಫಿ ಕುಡ್ದಿಯಾ?

ಗೋಪಿ: ಇಲ್ಲ.

ರಾಮಪ್ಪ: ಹೇಂ? ಯಾಕೆ ಕುಡೀಲಿಲ್ಲ?

ಗೋಪಿ: ನಿಮ್ಮ ಜೊತೆ ಕುಡಿಯೋಣಾಂತ!

ರಾಮಪ್ಪ: ರಾಜು ಬಂದಿದ್ದ ಅಲ್ವೇ?

ಗೋಪಿ: ಹೌದು.

ರಾಮಪ್ಪ: ಬೇರೆ ಯಾರಿದ್ರೂ?

ಗೋಪಿ: ಯಾರು ಇರ್‍ಲಿಲ್ಲ.

ರಾಮಪ್ಪ: ಎರಡು ಲೋಟ ಕಂಡದ್ರಿಂದ ಕೇಳಿದೆ!

ಗೋಪಿ: ಸುಬ್ಬು ಎರಡು ಲೋಟ ತಂದಿಟ್ಟ.

ರಾಮಪ್ಪ: (ವ್ಯಂಗ್ಯವಾಗಿ) ಅವ ಬುದ್ಧಿವಂತ!

ಗೋಪಿ: ಬುದ್ಧಿವಂತಿಕೆ ಏನು ಅದ್ರಲ್ಲಿ?

ರಾಮಪ್ಪ: ಇಬ್ಬರೂ ಒಂದೇ ಲೋಟದಲ್ಲಿ ಕುಡ್ಕೋದು ಚೆನ್ನಾಗಿರಲ್ಲಾಂತ ಎರಡು ಲೋಟ ತಂದಿಟ್ಟ (ತೀಕ್ಷ್ಣವಾಗಿ ಅವಳ ಮುಖ ನೋಡುತ್ತಾನೆ)

ಗೋಪಿ: (ಸ್ವಲ್ಪ ಸಿಡುಕಿನಿಂದ) ಇರಬಹುದು.

ರಾಮಪ್ಪ: (ಕುರ್ಚಿಯಿಂದ ಎದ್ದು ಅತ್ತಿತ್ತ ನಡೆಯುತ್ತ) ರಾಜು ಬಂದದ್ಯಾಕೆ?

ಗೋಪಿ: ನೋಡ್ಲಿಕ್ಕೆ!

ರಾಮಪ್ಪ: ನೋಡ್ಲಿಕ್ಕೆ ಮಾತ್ರನೆ?

ಗೋಪಿ: ನೋಡಿ ಮಾತಾಡ್ಲಿಕ್ಕೆ!

ರಾಮಪ್ಪ: ಮಾತಾಡಿ ಆಯ್ತೆ?

ಗೋಪಿ: ಇಲ್ಲ.

ರಾಮಪ್ಪ: (ಪಕ್ಕನೆ ನಿಂತು, ಗೋಪಿಯ ಮುಖನೋಡಿ) ಹೇಂ? ಯಾಕೆ ಮಾತಾಡ್ಲಿಲ್ಲ?

ಗೋಪಿ: ನೋಡ್ಲಿಲ್ಲ—ಮಾತಾಡ್ಲಿಲ್ಲ!

ರಾಮಪ್ಪ: ಏನೇ ಅದು?

ಗೋಪಿ: ಭಾವ ಬಂದದ್ದು ನಿಮ್ಮನ್ನ ಕಂಡು ಮಾತಾಡ್ಲಿಕ್ಕೆ! ಅವರು ಬರ್‍ವಾಗ ನೀವು ಇರ್‍ಲಿಲ್ಲ. ನೀವು ಬರ್‍ವಾಗ ಅವರು ಹೊರಟು ಹೋದ್ರು—ನಾನೇನ್ಮಾಡ್ಲಿ?

ರಾಮಪ್ಪ: ನನ್ನ ಹತ್ರ ಮಾತಾಡ್ಲಿಕ್ಕೆ ನಾನಿರ್‍ವಾಗ ಬರ್‍ಬೇಕಾಗಿತ್ತು.

ಗೋಪಿ: ಅದನ್ನ ಅವರಿಗೆ ಹೇಳ್ಬೇಕು—ನಂಗಲ್ಲ.

ರಾಮಪ್ಪ: ಅವ ಬಂದಿರೋದು ಯಾಕೇಂತ ನಂಗೊತ್ತು! ಹಳೇ ಸ್ನೇಹ ಹೊಸ್ತು ಮಾಡ್ಲಿಕ್ಕೆ!

ಗೋಪಿ: ಅದೇನೂ ಅಗತ್ಯ ಇಲ್ಲ.!

ರಾಮಪ್ಪ: ಅಂದ್ರೆ—ನಿಮ್ಮ ಸ್ನೇಹ ಯಾವಗಲೂ ಹೊಸತೇಂತ್ಲೆ?

ಗೋಪಿ: (ಸಿಡುಕಿನಿಂದ) ಹೌದು!

ರಾಮಪ್ಪ: ಏನು? ನಿಂಗೆ ನಾಚಿಕೇನೂ ಆಗೋದಿಲ್ವೆ?

ಗೋಪಿ: ನಾಚಿಕೇ ಕೆಲ್ಸ ನಾನೇನು ಮಾಡಿಲ್ಲ.

ರಾಮಪ್ಪ: ರಾಜು ಜೊತೆ ಚಕ್ಕಂದ ಹೊಡ್ಯೋದು ಮರ್‍ಯಾದೆ ಕೆಲ್ಸಾಂತ ತಿಳ್ಕೊಂಡಿದಿ—ಹಂಗಾದ್ರೆ!

ಗೋಪಿ: ನಾನು ಯಾರ ಜೊತೇನೂ ಚಕ್ಕಂದ ಹೊಡೀಲಿಲ್ಲ.

ರಾಮಪ್ಪ: ರಾಜು ಜೊತೆಯಲ್ಲಿ?

ಗೋಪಿ: ಇಲ್ಲ.

ರಾಮಪ್ಪ: ನಿಮ್ಮ ಸ್ನೇಹ ಬಿಟ್ಟಿಲ್ಲಾಂದೆ?

ಗೋಪಿ: ನಿಜ! ಆದ್ರೆ ನೀವು ಅನುಮಾನ ಮಾಡುವಂಥ ಸ್ನೇಹ ಅಲ್ಲ ಅದು.

ರಾಮಪ್ಪ: ಥೂ! ನಾನೊಬ್ಬ ಹುಂಬಾಂತ ತಿಳ್ಕೊಂಡಿದ್ಯೇನೆ ನೀನು?

ಗೋಪಿ: ಹಾಗೇನೂ ನಾನು ತಿಳ್ಕೊಂಡಿಲ್ಲ! ನನ್ನ ಅಣ್ಣನಂಗೆ ಅವರನ್ನ ನಾನು ಪ್ರೀತಿಸ್ತೀನಿ.

ರಾಮಪ್ಪ: ಸಾಕು—ಸಾಕು! ಅವನನ್ನ ಮೊದ್ಲಿಂದ ನೀನು ಅಣ್ಣಾಂತ ತಿಳ್ಕೊಂಡಿದ್ಯಾ?

ಗೋಪಿ: ಹಿಂದಿನ ಸಂಗ್ತಿ ಈಗ್ಯಾಕೆ?

ರಾಮಪ್ಪ: ಈಗಿನ ಆಟ ನೋಡಿ ಕೇಳಿದೆ!

ಗೋಪಿ: ಆಡಬಾರದ ಆಟ ಏನೂ ಆಡಿಲ್ಲ! ನನ್ನ ಕರ್ತವ್ಯ ನಂಗೊತ್ತು!

ರಾಮಪ್ಪ: ಹೋ! ನಿನ್ನ ಕರ್ತವ್ಯ!

ಗೋಪಿ: ಹೌದು! ನನ್ನ ಧರ್ಮ ನಾನು ಬಿಟ್ಟಿಲ್ಲ! ನೀವು ಮಾತ್ರ—

ರಾಮಪ್ಪ: (ನಡುವೆ ತಡೆದು) ನನ್ನ ಧರ್ಮ ಬಿಟ್ಟಿದೀನೀಂತಲ್ವೆ?

ಗೋಪಿ: ನಾನು ಹಾಗಂದಿಲ್ಲ.

ರಾಮಪ್ಪ: ಮತ್ತೇನು ನೀನು ಅನ್ನೋದು? ನೀನು ಮತ್ತೊಬ್ಬನ್ನ ಪ್ರೀತಿಸ್ತೀಂತ ನನ್ನ ಮುಖ ನೋಡಿ ಹೇಳ್ವಾಗ ನಾನು ನಗಾಡ್ಬೇಕೆ ಮತ್ತೆ?

ಗೋಪಿ: ನಾನು ಮತ್ತೊಬ್ಬನ್ನ ಪ್ರೀತಿಸ್ತಿದ್ದೇಂತ ಗೊತ್ತಿದ್ದೂ ನಗಾಡ್ತಾ ನಂಗೆ ತಾಳೀ ಕಟ್ಟಿದ್ರಿ! ಈಗ ಆತನ್ನ ಅಣ್ಣಾಂತ ತಿಳ್ಕೊಂಡು ಪ್ರೀತಿಸ್ತೀನೀಂತಂದ್ರೆ ಅದಕ್ಕೆ ನೀವು ಹೋಯಿಕೊಳ್ತೀರಿ!

ರಾಮಪ್ಪ: ರಾಜು ನನ್ನ ಶತ್ರು!

ಗೋಪಿ: ಅಲ್ಲ—ನಿಮ್ಮ ತಮ್ಮ!

ರಾಮಪ್ಪ: ಅದು ನೀನು ನೆನಪು ಮಾಡ್ಬೇಕಾಗಿಲ್ಲ!

(ಸೋಮಪ್ಪ ಪ್ರವೇಶಿಸುತ್ತಾನೆ.) ಗೋಪಿ ಒಂದು ಬದಿಗೆ ಸರಿದು ನಿಲ್ಲುತ್ತಾಳೆ.)

ರಾಮಪ್ಪ: (ಗಲಿಬಿಲಿಯಾಗಿ ಸೋಮಪ್ಪನೊಡನೆ) ಏನು ಯಾಕೆ ಬಂದೆ?

ಸೋಮಪ್ಪ: ನಮ್ಮ ಕೂಲಿ ಲೆಕ್ಕ ತೀರ್‍ಸಿ ಕೊಟ್ಟಿಲ್ಲ.

ರಾಮಪ್ಪ: ಒಂದು ಬಿಲ್ಲು ಖಜಾನೆಗೆ ಕಳ್ಸಿದೀನಿ. ಅದು ಪಾಸಾಗದೆ ಕೂಲಿ ಕೊಡ್ಲಿಕ್ಕಾಗೋಲ್ಲ.

ಸೋಮಪ್ಪ: ಹಾಗಂದ್ರೆ ನಾವೇನ್ ಮಾಡ್ಲಿ?

ರಾಮಪ್ಪ: ಬೇರೆಯವರ ಸುದ್ದಿ ನಿನಗ್ಯಾಕೆ? ನಿಂಗೆ ಏನಾದ್ರೂ ಬೇಕಿದ್ರೆ ಕೇಳು.

ಸೋಮಪ್ಪ: ನನ್ನ ಒಬ್ಬನ ಸಂಗ್ತಿ ಅಲ್ಲ. ಎಲ್ಲರೂ ಸೇರಿ ನನ್ನನ್ನ ಕಳ್ಸಿದಾರೆ—ಕೂಲಿ ಲೆಕ್ಕ ತೀರ್‍ಸಿ ಕೊಡೀಂತ ಕೇಳೋಕೆ.

ರಾಮಪ್ಪ: ಎಲ್ಲರ ಮಾತು ಒಬ್ಬ ಹೇಳೋದನ್ನ ನಾನು ಕೇಳೋದಿಲ್ಲ

ಸೋಮಪ್ಪ: ಇಲ್ಲಿನ ಕೆಲ್ಸ ಈವತ್ತು ಮುಗ್ದೋಯ್ತು. ನಾಳೆ ಬೇರೆ ಕಡೆ ಹೋಗ್ಬೇಕು. ಅಂಗ್ಡಿಯವರಿಗೆ ಕೊಡ್ಬೇಕಾದನ್ನ ಕೊಡ್ಬೇಕು. ಒಂದು ವಾರದ ಸಾಮಾನು ತಂದ್ ಹಾಕ್ಬೇಕು. ಕೂಲಿ ಕೊಡದಿದ್ರೆ ಅದೆಲ್ಲ ಹೆಂಗೆ ನಡ್ದೀತು?

ರಾಮಪ್ಪ: ಅದೊಂದೂ ನಂಗೊತ್ತಿಲ್ಲ. ಬಿಲ್ಲು ಪಾಸಾಗ್ದೆ ಕೂಲಿ ಕೊಡೋಕಾಗಲ್ಲ.

ಸೋಮಪ್ಪ: ಹಾಗಂದ್‌ಬಿಟ್ರೆ ನಾವು—

ರಾಮಪ್ಪ: ನಾವು—ನಾವೂಂತ ಅನ್ಬೇಡ! ನಿನ್ದು ಎಷ್ಟಾಗ್ತದೆ?

ಸೋಮಪ್ಪ: ಎಲ್ಲರ್‍ದೂ ಸೇರಿ ಅಂದಾಜು ಆರ್‍ನೂರು ರೂಪಾಯಿ ಆಗ್ತದೆ!

ರಾಮಪ್ಪ: ಎಲ್ಲರ ಸುದ್ದಿ ಎತ್ಬೇಡಾಂತಲ್ವೆ ಹೇಳಿದ್ದು?

ಸೋಮಪ್ಪ: ಎಲ್ಲರ ಸುದ್ದಿ ಎತ್ತೋಕೆ ನಾನ್ ಬಂದಿರೋದು.

ರಾಮಪ್ಪ: ಹಂಗಾದ್ರೆ ನೀನು ಹೋಗಬಹುದು! ಕೂಲಿ ಕೊಡೋಲ್ಲ.

ಸೋಮಪ್ಪ: ಕೊಡೋಲ್ಲಾಂತಂದ್ರೆ ನಾವೇನು ಸಾಯ್ಬೇಕೆ?

ರಾಮಪ್ಪ: ನನ್ನ ಅಡ್ಡಿ ಇಲ್ಲ—ಸಾಯ್ಬಹುದು!

ಸೋಮಪ್ಪ: ನಾವು ಸುಮ್ಗೆ ಕೇಳ್ತಾ ಇಲ್ಲ. ಕೆಲ್ಸ ಮಾಡಿದೀವಿ. ಕೂಲಿ ಸಿಗ್ಬೇಕು!

ರಾಮಪ್ಪ: ಕೂಲಿ ಕೊಡೋದಿಲ್ಲ. ಮಾಡೋದ್ ಮಾಡಿ.

(೧೦ನೇ ಪುಟ ನೋಡಿ)

## ಗೋಳಿಬಾರಿನ ಬಗ್ಗೆ ಬಹಿರಂಗ ವಿಚಾರಣೆಯಾಗಲಿ!

(೧ನೇ ಪುಟದಿಂದ)

ಸಲವಾರು ಕಮ್ಯೂನಿಸ್ಟ್ ಕಾರ್ಯಕರ್ತ ರನ್ನು ದಸ್ತಗಿರಿ ಮಾಡಿದರೆ ಇದು ಸಾಧ್ಯ ವಾದೀತೆಂದೆಣಿಸಿದ್ದಾರೆ.

ಈ ಅಶಾಂತಿ ವಾತಾವರಣಕ್ಕೆ ಸರ್ಕಾರದ ಕಾರ್ಮಿಕ ನೀತಿಯೇ ಕಾರಣ; ವಿಮಾನ ಕಾರ್ಖಾನೆಯ ಆಡಳಿತ ವರ್ಗದ ಉದ್ಧಟ ವರ್ತನೆಯಿಂದ ದಿನೇ ದಿನೇ ಕಾರ್ಮಿಕರಲ್ಲಿ ಅತೃಪ್ತಿ ಹೆಚ್ಚಾಗುತ್ತಿದೆ, ಸೆ. 144ರಿಂದ ಜನ ಮತ್ತಷ್ಟು ಕುಪಿತರಾಗುತ್ತಿದ್ದಾರೆಂಬುದನ್ನರಿಯಲು ಸರ್ಕಾರ ಯತ್ನಿಸುತ್ತಿಲ್ಲ. ಲೋಕಸಭೆಯಲ್ಲಿ ಈ ಸಮಸ್ಯೆಯನ್ನು ಚರ್ಚೆಗೆ ತರಲು ನಿಲುವಳಿ ಸೂಚನೆ ತರಲು ಯತ್ನಿಸಿದಾಗ ಸಭಾಧ್ಯಕ್ಷರು ತಳ್ಳಿ ಹಾಕಿದರು; ಶಾಂತಿಯನ್ನು ಕಾಪಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ, ಆದುದರಿಂದ ಲೋಕಸಭೆಯಲ್ಲಿ ಈ ವಿಷಯ ಚರ್ಚಿಸಲು ಸಾಧ್ಯವಿಲ್ಲವೆಂದರು. ಆದರೂ ಸಹ ಒಳಾಡಳಿತ ಸಚಿವರು ಈ ಬಗ್ಗೆ ಹೇಳಿಕೆಯನ್ನು ಕೊಟ್ಟರು; ಶಾಂತಿಯುತ ಪರಿಸ್ಥಿತಿಯನ್ನು ತರಲು ಯತ್ನಿಸುವುದಾಗಿ ಆಶ್ವಾಸನೆಯಿತ್ತರು. ಆದರೆ ವಿಧಾನ ಸಭೆಯಲ್ಲಿ ಒಳಾಡಳಿತ ಸಚಿವರು ಯಾವ ಹೇಳಿಕೆಯನ್ನೂ ಕೊಡಲಿಲ್ಲ.

ಸರ್ಕಾರದ ನೀತಿ ಬದಲಾಗುವಂತೆ ಇಂದು ಒತ್ತಾಯ ಅಗತ್ಯವಾಗಿದೆ. ಶಾಂತಿ ಏರ್ಪಡಾಗಲು 144 ನೇ ಸೆ. ಹಿಂತೆಗೆಯಬೇಕು; ವಿಮಾನ ಕಾರ್ಖಾನೆಯ ಆಡಳಿತ ವರ್ಗದಲ್ಲಿ ಬದಲಾವಣೆಯಾಗಬೇಕು; ಸರ್ಕಾರ ತನ್ನ ಕಾರ್ಮಿಕ ನೀತಿಯಲ್ಲಿ (ತ್ರಿನೇ ಟ್ರಿಬ್ಯೂನಲ್ ನೇಮಕ ಇತ್ಯಾದಿ) ಸುಧಾರಣೆಗಳನ್ನು ತರಬೇಕು! ನ್ಯಾಯ ಏರ್ಪಡಲು ಗೋಳಿಬಾರಿನ ಬಗ್ಗೆ ನಿಷ್ಪಕ್ಷಪಾತ ವಿಚಾರಣೆಯಾಗಬೇಕು! ಇದಕ್ಕೆ ಕಾರ್ಮಿಕರು ಒಂದಾಗಿ ಶಾಂತಿಯುತವಾಗಿ ಶ್ರಮಿಸಬೇಕಾಗಿದೆ:



## ಕಮ್ಯೂನಿಸ್ಟರ ಮೇಲೆ ಪೋಲೀಸರ ಖಟ್ಲೆ

(೧ನೇ ಪುಟದಿಂದ)

ದಸ್ತಗಿರಿಯಾದ ಇವರುಗಳನ್ನು ಬೆಂಗಳೂರಿನಿಂದ ಹೊರಗಿರುವ ಆಡುಗೋಡು ಕ್ಯಾಂಪಿನಲ್ಲಿ ಇರಿಸಲಾಯಿತು. ಊಟ ಉಪಚಾರಗಳ ವ್ಯವಸ್ಥೆಯಿಲ್ಲದೆ ಅಲ್ಲಿರಿಸಲಾಗಿತ್ತು. ಬಹಳ ಒತ್ತಾಯದ ನಂತರ ಸಂಜೆ 7-30ಕ್ಕೆ ಸ್ವಲ್ಪ ಬ್ರೆಡ್ಡನ್ನು ಕೊಡಲಾಯಿತು. ಮತ್ತೆ ರಾತ್ರೆ ಊಟ ಕೊಡದೆ ಇರಿಸಿದ್ದರು. ಆದರೆ ರಾತ್ರೆ ಬಹಳ ಗಲಾಟೆ ಮಾಡಿದ ನಂತರ ಎರಡು ಘಂಟೆ ಹೊತ್ತಿನಲ್ಲಿ ಪೋಲೀಸರು ಸ್ವಲ್ಪ ಆಹಾರವನ್ನಿತ್ತು ಅಲ್ಲಿಂದ ಅವರನ್ನು ನಗರದ ಅಲಸೂರು ಪೋಲೀಸ್ ಸ್ಟೇಷನ್ನಿಗೆ ತರಲಾಯಿತು.

ಆದರೆ ಅದೇ ಆಡುಗೋಡು ಕ್ಯಾಂಪಿನಲ್ಲಿ ಬಂಧಿತರಾಗಿರುವ 72 ಜನ ಏರ್ ಕ್ರಾಫ್ಟ್ ನೌಕರರಿಗೆ 25ನೇ ತಾರೀಖು ಮಂಗಳವಾರದಿಂದ ಆಹಾರವನ್ನು ಕೊಡದೆ ಒಂದು ಸಣ್ಣ ಕೊಠಡಿಯಲ್ಲಿ ಕೂಡಿಸಿ ಇಡಲಾಗಿದೆ. ಅವರಲ್ಲಿ ಅನೇಕರಿಗೆ ಲಾಠಿ ಪ್ರಹಾರದಿಂದ ತೀವ್ರ ಗಾಯಗಳಾಗಿವೆ. ಬಂಧಿತರಾದವರಿಗೆ ಆಹಾರವನ್ನು ಕೊಡದೆ ಇರುವುದು ಖಂಡನೀಯ. ಕೂಡಲೇ ಅವರಿಗೆ ಆಹಾರ ಕೊಡಬೇಕೆಂದೂ ಮತ್ತು ಅವರನ್ನು ನ್ಯಾಯಾಧಿಶರ ಮುಂದೆ ತರಬೇಕೆಂದೂ ಒತ್ತಾಯ ಪಡಿಸುತ್ತೇವೆ.

ಪೋಲಿಸರು ಉಪಾಧ್ಯಾಯ, ಸಿ.ಆರ್. ಕೃಷ್ಣರಾವ್ ಮತ್ತಿತರರನ್ನು 27ನೇ ತಾರೀಖು ಗುರುವಾರ ಮಧ್ಯಾಹ್ನ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ ಪಡಿಸಿ ಪೋಲಿಸ್ ರಿಮಾಂಡ್‌ಗೆ ಮಾರ್ಚ್ ಒಂದನೆ ತಾರೀಖಿನವರೆಗೆ ತೆಗೆದುಕೊಳ್ಳಲಾಗಿದೆ. ಶ್ರೀ ಸಿ. ಆರ್. ಕೃಷ್ಣರಾವ್ ಮತ್ತು ಶ್ರೀ ಗೋಪಾಲರವರನ್ನು ತಲಾ 500 ರೂ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಪೋಲೀಸರು ಎಲ್ಲರ ಮೇಲೆಯೂ, 144ನೇ ವಿಧಿಯನ್ನು ಉಲ್ಲಂಘಿಸಿದರೆಂದೂ, ಪೋಲೀಸು ಅಧಿಕಾರಿಯ ಮೇಲೆ ಕೈಮಾಡಿದರೆಂದು, ಆಕ್ರಮವಾಗಿ ಸಭೆ ನಡೆಸಿದರೆಂದೂ ಆಪಾದನೆ ಹೊರಿಸಿ, ಖಟ್ಲೆ ಹೂಡಿದ್ದಾರೆ.

(ವಿವರಗಳನ್ನು ಮುಂದಿನ ವಾರ ಪ್ರಕಟಿಸಲಾಗುವುದು.) (ಸಂ.)

## ....ಮನೆ ಮುರಿದ ಮಗ....

(೯ನೇ ಪುಟದಿಂದ)

ಗೋಪಿ: (ಮೆಲ್ಲಗೆ) ಆರ್ನೂರು—ಏಳ್ನೂರು ರೂಪಾಯಿ ಇಲ್ಲಿ ಇದೆ. ಅವರಿಗೆ ಕೊಡಬೇಕಾದ್ದನ್ನ ಕೊಟ್‌ಬಿಡಿ.

ರಾಮಪ್ಪ: (ಕೋಪದಿಂದ) ನಿನ್‌ಗ್ಯಾಕೆ ಅದೆಲ್ಲ? ತಲೆಹರಟೆ! ನೀನ್ ನಡಿ ಆಚೆ!

(ಗೋಪಿ ಖಿನ್ನಳಾಗಿ ಒಳಗೆ ಹೋಗುತ್ತಾಳೆ)

ಸೋಮಪ್ಪ: ನಮ್ಮ ಕೂಲಿ ಸಿಗ್ಬೇಕು!

ರಾಮಪ್ಪ: ಸಾಧ್ಯ ಇದ್ರೆ ವಸೂಲ್ ಮಾಡ್ಕೋ—ನಡಿ!

ಸೋಮಪ್ಪ: ವಸೂಲ್ ಮಾಡದೆ ಬಿಡ್ಲಿಕ್ಕೆ-ಅದು ನಮ್ಮ ರಕ್ತ ನೀರ್ಮಾಡಿ ದುಡ್ಡದ್ದು! ತಲೆ ಹೊಡ್ದು ಗಳಿಸಿದ್ದಲ್ಲ.

— ತೆರೆ —

(ಮುಂದುವರಿಯುವುದು)



Edited Printed and Published by C. R. Krishna Rao, at Janashakthi P...